ಹಾಸನಾಂಬೆ ದರ್ಶನ ವೇಳೆ ಕರೆಂಟ್ ಶಾಕ್

ಹಾಸನ: ಶ್ರೀ ಹಾಸನಾಂಬೆ ದರ್ಶನಕ್ಕೆ ಸರದಿ ಸಾಲಿನಲ್ಲಿ ನಿಂತಿದ್ದ ಭಕ್ತರಿಗೆ ವಿದ್ಯುತ್ ಸ್ಪರ್ಶಿಸಿದ ಹಿನ್ನೆಲೆಯಲ್ಲಿ ಉಂಟಾದ ನೂಕುನುಗ್ಗಲು, ಕಾಲ್ತುಳಿತದಲ್ಲಿ ಹಲವು ಭಕ್ತರು ಗಾಯಗೊಂಡಿದ್ದು, ಗಾಯಾಳುಗಳನ್ನು ಹಾಸನ ವೈದ್ಯಕೀಯ ಆಸ್ಪತ್ರೆ (ಹಿಮ್ಸ್)ಗೆ ದಾಖಲಿಸಿ, ಚಿಕಿತ್ಸೆ ನೀಡಲಾಗಿದೆ. ಈ ದಿಢೀರ್ ಬೆಳವಣಿಗೆಯಿಂದಾಗಿ ದೇಗುಲದ ಆವರಣದಲ್ಲಿ ಆತಂಕದ ವಾತಾವರಣ ನಿರ್ಮಾಣವಾಗಿತ್ತು. ಹೊರ ಜಿಲ್ಲೆಗಳಿಂದ ಭಾರೀ ಪ್ರಮಾಣದಲ್ಲಿ ಭಕ್ತರು ಆಗಮಿಸಿದ್ದ ಹಿನ್ನೆಲೆಯಲ್ಲಿ ಭಕ್ತರನ್ನು ನಿಯಂತ್ರಿಸಲು ಪೊಲೀಸರು, ದೇಗುಲದ ಸಿಬ್ಬಂದಿ ಹರಸಾಹಸ ಪಡಬೇಕಾಯಿತು.

ಕಾಲ್ತುಳಿತದಲ್ಲಿ ಹಲವರಿಗೆ ಗಾಯ

ಶುಕ್ರವಾರ ಬೆಳಿಗ್ಗೆಯಿಂದಲೇ ಹಾಸನಾಂಬೆ ದರ್ಶನಕ್ಕೆ ಸಾವಿರಾರು ಭಕ್ತರು ಸರದಿ ಸಾಲುಗಳಲ್ಲಿ ನಿಂತಿದ್ದರು. ಧರ್ಮದರ್ಶನ ಸಾಲು, ಟಿಕೆಟ್ ಸಾಲು, ಗಣ್ಯರು ಮತ್ತು ಅತಿಗಣ್ಯರ ಸಾಲುಗಳು ಭಕ್ತರಿಂದ ಭರ್ತಿಯಾಗಿದ್ದವು. ಮಧ್ಯಾಹ್ನ 12.30 ರ ಸಮಯದಲ್ಲಿ ಧರ್ಮ ದರ್ಶನದ ಸಾಲಿನಲ್ಲಿ ನಿಂತಿದ್ದ ಮಹಿಳೆಯೊಬ್ಬರಿಗೆ ಕಬ್ಬಿಣದ ಕಂಬಿ (ಬ್ಯಾರಿಕೇಡ್) ಮೂಲಕ ವಿದ್ಯುತ್ ತಗುಲಿದ ಅನುಭವವಾಗಿದೆ. ಆಕೆ ಕರೆಂಟ್ ಹೊಡೆಯಿತು ಎಂದು ಕೂಗಿಕೊಂಡ ತಕ್ಷಣ ಸಾಲಿನಲ್ಲಿ ನಿಂತಿದ್ದವರು ಆತಂಕಗೊಂಡು ಕಬ್ಬಿಣದ ಬೇಲಿ ಹಾರಿ ದಿಕ್ಕಾಪಾಲಾಗಿ ಓಡಲಾರಂಭಿಸಿದ್ದಾರೆ. ಈ ಸಂದರ್ಭದಲ್ಲಿ ನೂಕುನುಗ್ಗಲಿನಲ್ಲಿ ಕೆಳಕ್ಕೆ ಬಿದ್ದ ಮಹಿಳೆಯರು, ಮಕ್ಕಳ ಬೇಲೆ ಬ್ಯಾರಿಕೇಡ್ ಬಿದ್ದು ಗಾಯಗೊಂಡರೆ, ಕೆಲವರು ಕಾಲ್ತುಳಿತದಿಂದ ಅಸ್ವಸ್ಥರಾದರು. ಸ್ಥಳೀಯ ನಿವಾಸಿಗಳು, ಸಾರ್ವಜನಿಕರು ಸರದಿಯ ಸಾಲಿನಲ್ಲಿ ಬಿದ್ದು ನರಳಾಡುತ್ತಿದ್ದವರನ್ನು ಹೊರಗೆಳೆದು ಸಂತೈಸಿದರು. ಈ ವೇಳೆ ಕಾಲ್ತುಳಿತದಿಂದ 17 ಮಂದಿ ಗಾಯಗೊಂಡರು. ಐದು ಮಂದಿ ಆಸ್ಪತ್ರೆಯಲ್ಲಿ ಪ್ರಥಮ ಚಿಕಿತ್ಸೆ ಪಡೆದು ಮನೆಗೆ ಮರಳಿದ್ದಾರೆ. ಉಳಿದವರಿಗೆ ಚಿಕಿತ್ಸೆ ಮುಂದುವರಿದಿದ್ದು ಪ್ರಾಣಾಪಾಯದಿಂದ ಪಾರಾಗಿದ್ದಾರೆ.

ವಿದ್ಯುತ್ ಶಾಕ್‌ನ ಅವಘಡ ಗೊತ್ತಾಗುತ್ತಿದ್ದಂತೆಯೇ ದೇವಾಲಯದ ಆವರಣ, ಸರದಿಯ ಸಾಲುಗಳ ವಿದ್ಯುತ್ ದೀಪಗಳ ವಿದ್ಯುತ್ ಕಡಿತಮಾಡಿ ಅನಾಹುತವಾಗುವುದನ್ನು ತಡೆಯಲಾಯಿತು. ಸೆಸ್ಕ್ ಎಂಜಿನಿಯರುಗಳು ಮತ್ತು ಸಿಬ್ಬಂದಿ ಸ್ಥಳಕ್ಕೆ ಬಂದು ಪರಿಶೀಲನೆ ನಡೆಸಿದ್ದು, ನಿಖರ ಕಾರಣ ದೃಢಪಡಿಸಿಲ್ಲ. ಹಾಸನಾಂಬೆ ಜಾತ್ರಾ ಮಹೋತ್ಸವದ ಇತಿಹಾಸದಲ್ಲೇ ಇಂತಹ ಘಟನೆ ಮೊದಲ ಬಾರಿಗೆ ನಡೆದಿರುವುದು ಸಾಕಷ್ಟು ಅನುಮಾನ ಹಾಗೂ ಆತಂಕಕ್ಕೆ ಎಡೆ ಮಾಡಿಕೊಟ್ಟಿದೆ.

ಹಾಸನಾಂಬೆ ದರ್ಶನಕ್ಕೆ ಸಾಲಿನಲ್ಲಿ ನಿಂತಿದ್ದ ಭಕ್ತರಿಗೆ ವಿದ್ಯುತ್ ತಗುಲಿದಾಗ ಉಂಟಾದ ನೂಕುನುಗ್ಗಲಿನಲ್ಲಿ ನೆಲಕ್ಕೆ ಬಿದ್ದು ನರಳಾಡುತ್ತಿದ್ದ ಮಹಿಳೆಯರು.

ಬೇಡಿಕೆ ಈಡೇರದಿದ್ದರೆ ಹೋರಾಟ

ಚಿಕ್ಕಬಳ್ಳಾಪುರ: ಮುಂದಿನ ಫೆಬ್ರವರಿ, ಮಾರ್ಚ್‌ನ ಬಜೆಟ್ ಅಧಿವೇಶನದ ಒಳಗೆ 7ನೇ ವೇತನ ಆಯೋಗದ ವರದಿ ಪಡೆದು ರಾಜ್ಯ ಸರ್ಕಾರ ಅನುಷ್ಠಾನಗೊಳಿಸಬೇಕು. ಇಲ್ಲದಿದ್ದರೆ ಸರ್ಕಾರಿ ನೌಕರರ ಹೋರಾಟ ಅನಿವಾರ್ಯ ಎಂದು ರಾಜ್ಯ ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಸಿ.ಎಸ್.ಷಡಾಕ್ಷರಿ ಎಚ್ಚರಿಸಿದರು.

ನಗರದ ಜಿಲ್ಲಾಡಳಿತ ಭವನದ ಆಡಿಟೋರಿ ಯಂನಲ್ಲಿ ಶುಕ್ರವಾರ ಜಿಲ್ಲಾ ಸರ್ಕಾರಿ ನೌಕರರ ಸಂಘದಿಂದ ಹಮ್ಮಿಕೊಂಡಿದ್ದ ನೌಕರರ ಮಕ್ಕಳಿಗೆ ಪ್ರತಿಭಾ ಪುರಸ್ಕಾರ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ನೌಕರರ ಬೇಡಿಕೆಗಳ ಬಗ್ಗೆ ಕಾಲಕಾಲಕ್ಕೆ ಸಂಧಾನ, ಚರ್ಚೆ, ಮಾತುಕತೆಗಳು ನಡೆಯುತ್ತವೆ. ಆ ಮೂಲಕವೂ ನಮ್ಮ ಬೇಡಿಕೆ ಈಡೇರದಿದ್ದರೆ ಅನಿವಾರ್ಯವಾಗಿ ಹೋರಾಟಕ್ಕೆ ಇಳಿಯುತ್ತೇವೆ ಎಂದರು.

ಸಮಯ, ಸಂದರ್ಭ, ಪರಿಸ್ಥಿತಿಗಳು ಹೋರಾಟವನ್ನು ನಿರ್ಧರಿಸುತ್ತವೆ. ಸರ್ಕಾರಿ ನೌಕರರ ವಿಚಾರದಲ್ಲಿ ಸರ್ಕಾ ರದ ಜೊತೆಗೆ ಯಾವುದೇ ಹೊಂದಾಣಿಕೆ ಮಾಡಿಕೊಳ್ಳುವ ಜಾಯಮಾನ ನನ್ನದಲ್ಲ, ನನ್ನ ಹೋರಾಟದ ಬದುಕು, ತ್ಯಾಗ ಸರ್ಕಾರಿ ನೌಕರರಿಗೆ ಮೀಸಲಾಗಿದೆ ಎಂದ ಅವರು, ಬಜೆಟ್ ಅಧಿವೇಶನದ ವೇಳೆಗೆ ಸರ್ಕಾರಿ ನೌಕರರಿಗೆ 7ನೇ ವೇತನ ಆಯೋಗದ ವರದಿ ಪಡೆದು ಅನುಷ್ಠಾನಗೊಳಿಸಬೇಕು, ಹೊಸ ಪಿಂಚಣಿ ಯೋಜನೆಯನ್ನು ರದ್ದುಗೊಳಿಸಿ ಹಳೇ ಪಿಂಚಣಿ ಯೋಜನೆ ಜಾರಿಗೆ ತರಬೇಕೆಂದು ರಾಜ್ಯ ಸರ್ಕಾರವನ್ನು ವಿನಂತಿ ಮಾಡಿದರು.

> **ನಾನು ಹೆದರಿ ಕೊಳ್ಳುವ ವ್ಯಕ್ತಿ ಅಲ್ಲ. ತಪ್ಪು ಮಾಡಿ ದ್ದರೆ ರುಜುವಾತು ಮಾಡಿ, ಸರ್ಕಾರಿ ಕೆಲಸಕ್ಕೆ ರಾಜೀ ನಾಮೆ ಕೊಟ್ಟು ಮನೆಗೆ ಹೋಗುತ್ತೇ ನೆಂದು ಹಿಂದಿನ ಸರ್ಕಾರದಲ್ಲೂ ಹೇಳಿದ್ದೆ. ನನ್ನ ಮೇಲೆ ಯಾವುದೇ ತಪ್ಪು ಸಾಬೀತಾ ದರೆ ಪರಪ್ಪನ ಆಗ್ರಹಾರ ಜೈಲಿಗೆ ಕಳಿಸಿ ಎಂದು ಮುಖ್ಯಮಂತ್ರಿಗಳಿಗೆ ಖುದ್ದು ಹೇಳಿ ಬಂದಿದ್ದೆ. ವರ್ಗಾವಣೆ ಎನ್ನುವುದು ಸರ್ಕಾರದಲ್ಲಿ ಸಹಜ ಪ್ರತಿಕ್ರಿಯೆ.**
>
> - **ಎನ್.ಷಡಾಕ್ಷರಿ,** ಸರ್ಕಾರಿ ನೌಕರರ ಸಂಘದ ಅಧ್ಯಕ್ಷ

ಬರ ಪರಿಸ್ಥಿತಿಯಲ್ಲಿ 26 ಸಂಸದರು ನಾಪತ್ತೆ: ಕಾಂಗ್ರೆಸ್ ಲೇವಡಿ

ಬೆಂಗಳೂರು: ರಾಜ್ಯದಲ್ಲಿ ಎಂದೂ ಕಂಡರಿಯದ ಬರ ಇದೆ. ಸಂಸದರಿಂದ ಅನೇಕ ಅನುದಾನಗಳು ರಾಜ್ಯಕ್ಕೆ ಬರಬೇಕು. ಇಂತಹ ಪರಿಸ್ಥಿತಿಯಲ್ಲೇ ಸಂಸದರು ನಾಪತ್ತೆಯಾಗಿದ್ದಾರೆ. ರಾಜಕೀಯ ಒತ್ತಟ್ಟಿಗಿರಲಿ, ರಾಜ್ಯದ ಪರವಾಗಿ ಕೂಡ ದನಿ ಎತ್ತುತ್ತಿಲ್ಲ ಯಾಕೆ ಎಂದು ಕೆಪಿಸಿಸಿ ವಕ್ತಾರ ಲಕ್ಷ್ಮಣ್ ಆಕ್ರೋಶ ವ್ಯಕ್ತಪಡಿಸಿದರು.

ಕರ್ನಾಟಕದಿಂದ ಆಯ್ಕೆಯಾದ 26 ಸಂಸದರು ಎಲ್ಲಿ ಕಾಣೆಯಾಗಿದ್ದಾರೆ. ಅವರನ್ನು ಬಿಜೆಪಿಯವರೇ ಬೇರೆ ದೇಶಗಳಿಗೆ ಕಳಿಸಿಕೊಟ್ಟಿದ್ದಾರೆಯೇ? ಅವರು ಕೆಲಸ ಮಾಡುವುದು ಬೇಡ, ನಮ್ಮ ರಾಜ್ಯ ಸರ್ಕಾರದ ವಿರುದ್ಧವಾದರೂ ಹೇಳಿಕೆ ನೀಡಲಿ ಎಂದರೂ ನೀಡುತ್ತಿಲ್ಲ, ಬಿಜೆಪಿ ಹೈಕಮಾಂಡ್ ಎಲ್ಲಾ ಸಂಸದರ ವಾಕ್ ಸ್ವಾತಂತ್ರವನ್ನು ಕಸಿದುಕೊಂಡಿದೆಯೇ? ಯಾವ ಸಂಸದರೂ ತುಟಿ ಬಿಚ್ಚದಂತೆ ನೋಡಿಕೊಳ್ಳಲಾಗುತ್ತಿದೆಯೇ? ನೋಟಿಸ್ ನೀಡುವ, ಮಾತನಾಡಿದರೆ ಬೆದರಿಕೆ ಹಾಕುವ ಮೂಲಕ ಬಾಯಿ ಮುಚ್ಚಿಸಲಾಗುತ್ತಿದೆಯೇ ಎಂದು ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ತರಾಟೆಗೆ ತೆಗೆದುಕೊಂಡರು.

ಕೇಂದ್ರದಿಂದ ಬಂದ ನಾಲ್ಕು ಬರ ಅಧ್ಯಯನ ಸಮಿತಿಗಳು, ಕೇವಲ 'ಫ್ಲೈಯಿಂಗ್ ವಿಸಿಟ್' (ವೈಮಾನಿಕ ಭೇಟಿ) ಮಾಡಿಹೋದವು. ನಂತರ ಏನಾಯ್ತು ಎಂಬುದು ಗೊತ್ತೇ ಇಲ್ಲ, ಬರ ಅಧ್ಯಯನ ವರದಿಯನ್ನು ಇನ್ನೂ ಆ ಸಮಿತಿಯು ಕೇಂದ್ರ ಸರ್ಕಾರಕ್ಕೆ ಸಲ್ಲಿಸಿಯೇ ಇಲ್ಲ ಅನಿಸುತ್ತದೆ. ಒಂದು ವೇಳೆ ವರದಿ ಕೊಟ್ಟಿದ್ದರೆ ಎಷ್ಟು ಹಣ ಬಿಡುಗಡೆಗೆ ಶಿಫಾರಸು ಮಾಡಲಾಗಿದೆ? ಅದರ ಮಾಹಿತಿಯೇ ಇಲ್ಲ, ಅಕ್ಟೋಬರ್ ಅಂತ್ಯದವರೆಗೆ ಸರ್ಕಾರ ನಡೆಸಿರುವ ಅಧ್ಯಯನದ ಪ್ರಕಾರ ಸುಮಾರು 33,700 ಕೋಟಿ ನಷ್ಟವಾಗಿದೆ. ಅದರಲ್ಲಿ ಮಧ್ಯಂತರವಾಗಿ 17,900 ಕೋಟಿ ಬಿಡುಗಡೆ ಮಾಡಿ ಎಂದು ಮನವಿ ಸಲ್ಲಿಸಲಾಗಿದೆ. ಆದರೆ, ಈ ಬಗ್ಗೆ ಯಾವ ಸಂಸದರೂ ಚಕಾರ ಎತ್ತುತ್ತಿಲ್ಲ ಎಂದು ಆರೋಪಿಸಿದರು.

ರಾಜ್ಯದ 236 ತಾಲ್ಲೂಕುಗಳ ಪೈಕಿ 223 ತಾಲ್ಲೂಕುಗಳಲ್ಲಿ ಬರ ಎಂದು ಘೋಷಣೆ ಮಾಡಲಾಗಿದೆ. ರಾಜ್ಯ ಸರ್ಕಾರವು ಬರ ಪರಿಹಾರ ಹಣದಲ್ಲಿ 900 ಕೋಟಿಯಲ್ಲಿ 334 ಕೋಟಿ ರೂ.ಗಳನ್ನು ಈಗಾಗಲೇ ಬಿಡುಗಡೆ ಮಾಡಿದೆ. ಹಾಗೂ ಎಲ್ಲಾ ಜಿಲ್ಲಾಧಿಕಾರಿಗಳಿಗೆ ತುರ್ತು ಹಣವನ್ನು ಉಚಿತ ಕುಡಿಯುವ ನೀರಿಗೆ ಬಳಸಿಕೊಳ್ಳಬೇಕು ಎಂದು ಸೂಚಿಸಿದೆ. ಮತ್ತೊಂದೆಡೆ 2024ರ ಲೋಕಸಭಾ ಚುನಾವಣೆಯನ್ನು ಗಮನದಲ್ಲಿಟ್ಟುಕೊಂಡು ಕೇವಲ ರಾಜ್ಯ ಸರ್ಕಾರವನ್ನು ದೂಷಣೆ ಮಾಡುತ್ತಿರುವ ಬಿಜೆಪಿ ಏನೂ ಕೆಲಸ ಮಾಡುತ್ತಿಲ್ಲ ಎಂದು ದೂರಿದರು.

ರಾಜ್ಯದ ಕಂದಾಯ, ಗ್ರಾಮೀಣಾಭಿವೃದ್ಧಿ ಸೇರಿದಂತೆ ನಾಲ್ಕು ಜನ ಸಚಿವರು ಬರ ಪರಿಹಾರಕ್ಕೆ ಎಂದು ಕೇಂದ್ರ ಸಚಿವರಿಗೆ ಮನವಿ ಸಲ್ಲಿಸಿದ್ದಾರೆ. ಜಂಟಿ ಕಾರ್ಯದರ್ಶಿಗಳು ಸೇರಿದಂತೆ ಸರ್ಕಾರದ ಉನ್ನತ ಅಧಿಕಾರಿಗಳು ಬರ ಪರಿಹಾರ ನೀಡಿ ಎಂದು ಮನವಿ ಸಲ್ಲಿಸಲಾಗಿದೆ. ಬಿಜೆಪಿಯ ಯಾರೊಬ್ಬರೂ ಬರ ಪರಿಹಾರಕ್ಕೆ ಕೇಂದ್ರ ಸಚಿವರನ್ನು ಭೇಟಿಯಾಗುವ ಕೆಲಸ ಮಾಡಿಲ್ಲ ಎಂದು ಆರೋಪಿಸಿದ ಅವರು, 2016-17ರಲ್ಲಿ ಬರ ಬಂದಾಗಲೂ ಕರ್ನಾಟಕದ ಕಡೆ ತಿರುಗಿ ನೋಡಲಿಲ್ಲ, 2019ರಲ್ಲಿ ಅತಿವೃಷ್ಟಿಯಾದಾಗ ಇದೇ ಕೇಂದ್ರ ಸರ್ಕಾರ 50 ಸಾವಿರ ಕೋಟಿ ನಷ್ಟವಾಗಿದೆ ಎಂದು ಹೇಳಿತ್ತು. ಆದರೆ ಕೊಟ್ಟಿದ್ದು ಕೇವಲ 1,447 ಕೋಟಿ ರೂ. ಕರ್ನಾಟಕ ಅಂದರೆ ಬಿಜೆಪಿಯವರಿಗೆ ಯಾಕೆ ಇಷ್ಟೊಂದು ದ್ವೇಷ ಎಂದು ತರಾಟೆಗೆ ತೆಗೆದುಕೊಂಡರು. ವಿಧಾನ ಪರಿಷತ್ ಮಾಜಿ ಸದಸ್ಯ ಹಾಗೂ ಕೆಪಿಸಿಸಿ ವಕ್ತಾರ ರಮೇಶ್ ಬಾಬು ಮಾತನಾಡಿದರು.

IndusInd Bank ಇಂಡಸ್‌ಇಂಡ್ ಬ್ಯಾಂಕ್ ಲಿಮಿಟೆಡ್.

#1-10-72, 3ನೇ ಮಹಡಿ, ಅಶೋಕ ಜನಾರ್ದನ ಚೇಂಬರ್ಸ್, ಬೇಗಂಪೇಟೆ,
ಹೈದರಾಬಾದ್-500016, ಫೋ: (040) 40916229

ಸರ್ಫೇಸಿ ಕಾಯಿದೆ 2002ರ ಅಡಿಯಲ್ಲಿ ಇ-ಹರಾಜು ಮಾರಾಟದ ಘೋಷಣೆ

ಭದ್ರತೀಕರಣ ಮತ್ತು ಹಣಕಾಸು ಸ್ವತ್ತುಗಳ ಪುನರ್ನಿರ್ಮಾಣ ಮತ್ತು ಭದ್ರತಾ ಹಿತಾಸಕ್ತಿ ಜಾರಿ ಕಾಯಿದೆ, 2002 ಜಾರಿ ಅಡಿಯಲ್ಲಿ ಸ್ಥಿರ ಸ್ವತ್ತಿನ ಮಾರಾಟ(ಇನ್ನು ಮುಂದೆ ಕಾಯಿದೆ ಎಂದು ಉಲ್ಲೇಖಿಸಲಾಗುತ್ತದೆ).

ಈ ಮೂಲಕ ಸಾಮಾನ್ಯವಾಗಿ ಸಾರ್ವಜನಿಕರಿಗೆ ಮತ್ತು ನಿರ್ದಿಷ್ಟವಾಗಿ ಸಾಲಗಾರ (ರು) ಮತ್ತು ಖಾತರಿದಾರರಿಗೆ (ರು) ನೋಟೀಸನ್ನು ನೀಡಲಾಗಿದೆ, ಕೆಳಗೆ ವಿವರಿಸಿದ ಸಂರಕ್ಷಿತ ಆಸ್ತಿಯನ್ನು ಸುರಕ್ಷಿತ ಸಾಲದಾತರಿಗೆ ಅಡಮಾನ/ವಹಿಸಲಾಗಿದ್ದು, ಮೆಸರ್ಸ್ ಇಂಡಸಿಂಡ್ ಬ್ಯಾಂಕ್ ಲಿಮಿಟೆಡ್ (ಸುರಕ್ಷಿತ ಸಾಲದಾತ)ನ ಅಧಿಕೃತ ಅಧಿಕಾರಿಯವರು ಅದನ್ನು ತಮ್ಮ ಸ್ವಾಧೀನಕ್ಕೆ ಪಡೆದುಕೊಂಡಿದ್ದಾರೆ. **31.10.2023**ಕ್ಕೆ ಅನ್ವಯವಾಗುವಂತೆ **ರೂ. 1,10,69,641.30/- (ಒಂದು ಕೋಟಿ ಹತ್ತು ಲಕ್ಷದ ಅರುವತ್ತೊಂಬತ್ತು ಸಾವಿರದ ಆರುನೂರ ನಲ್ವತ್ತೊಂದು ರೂಪಾಯಿ ಹಾಗೂ ಮೂವತ್ತು ಪೈಸೆಗಳು ಮಾತ್ರ)** ಮೊತ್ತದ ವಸೂಲಾತಿಗಾಗಿ ಆಸ್ತಿಯನ್ನು **"ಎಲ್ಲಿ ದೆಯೋ ಅಲ್ಲಿ", "ಹೇಗಿದೆಯೋ ಹಾಗೆ"**, ಮತ್ತು **"ಇದ್ದಲ್ಲಿ ಇರುವಂತೆ", "ಯಥಾಸ್ಥಿತಿಯಲ್ಲಿ" ದಿನಾಂಕ 05/12/2023 ರಂದು ಮಾರಾಟ ಮಾಡಲಾಗುತ್ತದೆ. ಜೊತೆಗೆ ಸಾಲಗಾರ: ಮೆಸರ್ಸ್ ಸಫಾ ರಿಟೈಲ್, ಸಹ-ಸಾಲಗಾರರು/ ಖಾತರಿದಾರರು: 1. ಶ್ರೀ ಅಖಿಲ್ ಅಹ್ಮದ್, 2. ಶ್ರೀಮತಿ ಬಾತುಲಾ ಕೌಸರ್** - ಇವರಿಗೆ ಒಪ್ಪಂದದ ದರದಲ್ಲಿ ಹೆಚ್ಚಿನ ಬಡ್ಡಿಯೊಂದಿಗೆ ಮತ್ತು ಇಂಡಸಿಂಡ್ ಬ್ಯಾಂಕ್ ಲಿಮಿಟೆಡ್‌ಗೆ ಪಾವತಿಸಬೇಕಾದ ವೆಚ್ಚಗಳು, ಶುಲ್ಕಗಳು ಮತ್ತು ವೆಚ್ಚಗಳನ್ನು ವಿಧಿಸಲಾಗುತ್ತದೆ.

ಸ್ಥಿರಾಸ್ತಿಗಳ ವಿವರಣೆ: ಪರಿವರ್ತಿತ ಸೈ ನಂ.46ರಲ್ಲಿ ಪ್ರತ್ಯೇಕಿಸಿದ ಸೈಟ್ ನಂ. 136, ಹಳೆ ಖಾತಾ ನಂ. 410, ಮೌಲ್ಯಮಾಪನ ನಂ. 304, ಹೊಸ ವಿ.ಪಿ ಖಾತಾ ನಂ. 229, ಬಿಬಿಎಂಪಿ ದಸ್ತಾವೇಜು ಖಾತಾ ನಂ. 833ರ ಪ್ರಕಾರ, ಮೀನಾಕ್ಷಿ ಲೇಔಟ್, ಕಾಳೇನ ಅಗ್ರಹಾರ ಗ್ರಾಮ, ಬೇಗೂರು ಹೋಬಳಿ, ಬೆಂಗಳೂರು ದಕ್ಷಿಣ ತಾಲೂಕು, ಪ್ರಸ್ತುತ ಬಿಬಿಎಂಪಿ ವ್ಯಾಪ್ತಿಯಲ್ಲಿ ಬರುವ ಆಸ್ತಿಯ ಎಲ್ಲಾ ಸರ್ವಾದಿ. ಅಳತೆಯಲ್ಲಿ: ಪೂರ್ವದಿಂದ ಪಶ್ಚಿಮಕ್ಕೆ 20 ಅಡಿ, ಉತ್ತರದಿಂದ ದಕ್ಷಿಣಕ್ಕೆ: 80 ಅಡಿ, ಒಟ್ಟು ಅಳತೆಯಲ್ಲಿ 1600 ಚ.ಅ. ಇದ್ದು, ಪೂರ್ವದಲ್ಲಿ -ಖಾಸಗಿ ಆಸ್ತಿ, ಪಶ್ಚಿಮದಲ್ಲಿ -ಖಾಲಿ ಜಾಗ, ಉತ್ತರದಲ್ಲಿ - ರಸ್ತೆ, ದಕ್ಷಿಣದಲ್ಲಿ -ಖಾಸಗಿ ಆಸ್ತಿ -ಗಡಿಗಳನ್ನು ಹೊಂದಿದೆ.

ರೂ. 84,24,000/- (ಎಂಬತ್ನಾಲ್ಕು ಲಕ್ಷ ಇಪ್ಪತ್ತನಾಲ್ಕು ಸಾವಿರ ರೂಪಾಯಿಗಳು ಮಾತ್ರ)
ರೂ.8,42,400/- (ಎಂಟು ಲಕ್ಷದ ನಲ್ವತ್ತೆರಡು ಸಾವಿರದ ನಾಲ್ನೂರು ರೂಪಾಯಿಗಳು ಮಾತ್ರ)
ಬಿಡ್ ಏರಿಕೆ : ರೂ. 50,000/- (ಐವತ್ತು ಸಾವಿರ ರೂಪಾಯಿಗಳು ಮಾತ್ರ)

ಹರಾಜಿನ ವಿಧಾನ	**ಇ-ಹರಾಜು**
ಆಸ್ತಿಯ ಪರಿಶೀಲನೆ	**24/11/2023ರಂದು ಪೂರ್ವಾಹ್ನ 11.00ರಿಂದ ಅಪರಾಹ್ನ 01.00ರವರೆಗೆ**

ಸಂಪರ್ಕ ವ್ಯಕ್ತಿ ಮತ್ತು ದೂರವಾಣಿ ಸಂಖ್ಯೆ: ಶ್ರೀ ಜಾನ್ಸಿ ರಾವ್ ಮೊ: 9886090570, ಶ್ರೀ ಚಕ್ರಧಾರಿ ಶುಭಂ ಮೊ: 9304376755 ಮತ್ತು ಅಧಿಕೃತ ಅಧಿಕಾರಿ ಶ್ರೀ ವರದರಾಜ್ ಮೊ: 9966078652 vardaraj.devaraj@indusind.com.

ಬಿಡ್ ಸಲ್ಲಿಸಲು ಕೊನೆಯ ದಿನಾಂಕ (ಇ-ಹರಾಜು): **04/12/2023ರಂದು ಸಂಜೆ 04:00ರವರೆಗೆ**

ಈ ಪ್ರಕಟಣೆಯು ಮೇಲೆ ತಿಳಿಸಲಾದ ಸಾಲಗಾರ/ಖಾತರಿದಾರರಿಗೆ ಭದ್ರತಾ ಹಿತಾಸಕ್ತಿ (ಜಾರಿ) ನಿಯಮ 2002ರ ನಿಯಮ 8(6) ಪ್ರಕಾರ ಹದಿನೈದು (15) ದಿನಗಳ ನೋಟೀಸಾಗಿದೆ.

ಬಿಡ್ದಾರರು ತಮ್ಮ ಬಿಡ್‌ಗಳನ್ನು ಸಲ್ಲಿಸುವುದಕ್ಕೆ ಮೊದಲು ಇ-ಹರಾಜು ಮಾರಾಟದ ವಿವರವಾದ ನಿಯಮಗಳು ಮತ್ತು ಷರತ್ತುಗಳಿಗಾಗಿ, ನಿಗದಿತ ಆಸ್ತಿಯ ಮಾರಾಟ ಮತ್ತು ಇತರ ವಿವರಗಳಿಗಾಗಿ ಸುರಕ್ಷಿತ ಸಾಲದಾತರ ವೆಬ್‌ಸೈಟ್ ಅಂದರೆ https://www.indusindbank.com ನಲ್ಲಿ ಒದಗಿಸಲಾದ ಲಿಂಕ್ ಅನ್ನು ದಯವಿಟ್ಟು ನೋಡಬಹುದು, ಅಲ್ಲದೆ https://www.bankeauctions.com ವೆಬ್‌ಸೈಟ್‌ಗೆ ಭೇಟಿ ನೀಡಬಹುದು.

ಸ್ಥಳ: ಬೆಂಗಳೂರು, ದಿನಾಂಕ: 07/11/2023 **ಸಹಿ/-ಅಧಿಕೃತ ಅಧಿಕಾರಿ, ಇಂಡಸಿಂಡ್ ಬ್ಯಾಂಕ್ ಲಿಮಿಟೆಡ್**

ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ

ನಂ.49, "ಪರಿಸರ ಭವನ", 1 ರಿಂದ 5ನೇ ಅಂತಸ್ತು, ಚರ್ಚ್ ಸ್ಟ್ರೀಟ್,
ಬೆಂಗಳೂರು-560 001, ಕರ್ನಾಟಕ, ಭಾರತ
ಫೋನ್: 25581383, 25589112, 25586520, ಫ್ಯಾಕ್ಸ್: 080-25586321
ಈ-ಮೇಲ್: ho@kspcb.gov.in ವೆಬ್‌ಸೈಟ್ : https://kspcb.karnataka.gov.in.

No.PCB/144/INFRA/EPH/2023/4274 **Date: 10.11.2023**

ಪರಿಸರ ಸಾರ್ವಜನಿಕ ಸಭೆಗಾಗಿ ಸೂಚನೆ

ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ, ಇವರು ಕುಶಾಲನಗರ, ಮೈಸೂರು ರಾ.ಹೆ-275 ರಸ್ತೆಯನ್ನು 02 ಲೇನ್‌ಗಳಿಂದ 4/6 ಲೇನ್‌ಗಾಗಿ ಅಗಲೀಕರಣ ಮತ್ತು ಭುಜಗಳೊಂದಿಗಿನ ಉನ್ನತೀಕರಣದ ಯೋಜನೆಯ ಪ್ರಸ್ತುತ ಕಿಲೋಮೀಟರ್, 124.488 (ಚೈನೇಜ್) 122+200) ರಿಂದ ಕಿ.ಮೀ 223.86 (ಚೈನೇಜ್ 214+535) ಒಟ್ಟು ಉದ್ದ 92.335 ಕಿ.ಮೀ. ರಸ್ತೆಯ 2.3 ಕಿ.ಮೀ. ಉದ್ದ ಕೊಡಗು ಜಿಲ್ಲೆಯ ವ್ಯಾಪ್ತಿಗೆ ಒಳಪಡುತ್ತದೆ. ಸದರಿ ಯೋಜನೆಗೆ ಪರಿಸರ ಅಘಾತ ಅಧ್ಯಯನ ಅಧಿಸೂಚನೆ ದಿನಾಂಕ 14.09.2006ರ ಪ್ರಕಾರ ಪರಿಸರ ವಿಮೋಚನಾ ಪತ್ರವನ್ನು ಪಡೆಯಬೇಕಾಗಿರುತ್ತದೆ ಮತ್ತು ಅದರ ಅಂಗವಾಗಿ ಸಾರ್ವಜನಿಕ ಪರಿಸರ ಆಲಿಕೆ ಸಭೆಯನ್ನು ನಡೆಸಬೇಕಾಗಿರುತ್ತದೆ. ಅದರಂತೆ ಕೇಂದ್ರ ಅರಣ್ಯ ಮತ್ತು ಪರಿಸರ ಮಂತ್ರಾಲಯ, ನವದೆಹಲಿ ಇವರಿಂದ ಉಲ್ಲೇಖದ ನಿಯಮಗಳು (Terms of Reference, TOR) ಪತ್ರವನ್ನು No.F.No.10/21/2022-IA.III ದಿನಾಂಕ 5.5.2022 ರಂದು ಪಡೆದಿರುತ್ತಾರೆ ಮತ್ತು ಪ್ರವರ್ತಕರ ಪತ್ರ ಸಂಖ್ಯೆ. NHAINH-275/Mys-Mad/EC.2023-24/1272 ದಿನಾಂಕ 26.9.2023, ಕೋರಿಕೆಯ ಪ್ರಕಾರ ಮಾನ್ಯ ಕೊಡಗು ಜಿಲ್ಲಾಧಿಕಾರಿಗಳು ದಿನಾಂಕ: 13.12.2023ಕ್ಕೆ ನಿಗಧಿಪಡಿಸಿರುತ್ತಾರೆ.

ಸದರಿ ವಿವರಗಳು ಈ ಕೆಳಕಂಡಂತಿವೆ.

1. ಸಂಸ್ಥೆಯ ಹೆಸರು ಮತ್ತು ವಿಳಾಸ: ಶ್ರೀ ರಾಹುಲ್ ಕುಮಾರ್ ಗುಪ್ತಾ, DGM (T) & Project Director, ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ, Pu-Ramangara (Mysuru). ಬಸವನಪುರ (ರಾಮದೇವರಪಾದ), ರಾಮನಗರ, ಕರ್ನಾಟಕ-562128.

2. ಉದ್ದೇಶಿತ ಯೋಜನೆಯ ಸ್ಥಳ: ರಾ.ಹೆ-275 ನ್ನು 2 ಲೇನ್‌ಗಳಿಂದ 4/6 ಲೇನ್‌ಗಾಗಿ ಅಗಲೀಕರಣ ಮತ್ತು ಭುಜಗಳೊಂದಿಗಿನ ಉನ್ನತೀಕರಣದ ಯೋಜನೆಯ ಪ್ರಸ್ತುತ ಕಿಲೋಮೀಟರ್, 124.488 (ಚೈನೇಜ್) 122+200) ರಿಂದ ಕಿ.ಮೀ 223.86 (ಚೈನೇಜ್ 214+535) ಒಟ್ಟು ಉದ್ದ 92.335 ಕಿ.ಮೀ ಅಭಿವೃದ್ಧಿಪಡಿಸುವ ಯೋಜನೆಯಡಿಯಲ್ಲಿ 2.3 ಕಿ.ಮೀ.ಉದ್ದ ಕೊಡಗು ಜಿಲ್ಲೆಯ ವ್ಯಾಪ್ತಿಗೆ ಒಳಪಡುತ್ತದೆ.

3. ಯೋಜನೆಯ ಕಾರ್ಯಚಟುವಟಿಕೆ: ರಾ.ಹೆ. 275 ರ ರಸ್ತೆಯನ್ನು 2 ಲೇನ್‌ಗಳಿಂದ 4/6 ಲೇನ್‌ಗಾಗಿ ಅಗಲೀಕರಣ ಮತ್ತು ಭುಜಗಳೊಂದಿಗಿನ ಉನ್ನತೀಕರಣದ ಯೋಜನೆ.

4. ಪರಿಸರ ಸಾರ್ವಜನಿಕ ಸಭೆಯ ಸ್ಥಳ, ದಿನಾಂಕ ಮತ್ತು ಸಮಯ: 13ನೇ ಡಿಸಂಬರ್ 2023 ರಂದು ಬುಧವಾರ ಬೆಳಿಗ್ಗೆ 11.00 ಘಂಟೆಗೆ ಯೋಜನಾ ಪ್ರದೇಶವಾದ ಗುಡ್ಡೆಹೊಸೂರು ಗ್ರಾಮ ಪಂಚಾಯಿತಿಯ ಸಮುದಾಯ ಭವನ, ಗುಡ್ಡೆಹೊಸೂರು, ಕುಶಾಲನಗರ ತಾಲ್ಲೂಕು, ಕೊಡಗು ಜಿಲ್ಲೆ.

5. ಯೋಜನೆಯ ವೆಚ್ಚ: ರೂ. 236.87 ಕೋಟಿಗಳು.

5. ಪರಿಸರ ಸಾರ್ವಜನಿಕ ಕಾರ್ಯಕಾರಿ ಸಾರಾಂಶ ಸಾರ್ವಜನಿಕ ಪರಾಮರ್ಶೆಗೆ ಲಭ್ಯವಿರುವ ಸ್ಥಳ: (ಅ) ಜಿಲ್ಲಾಧಿಕಾರಿಗಳ ಕಛೇರಿ, ಕೊಡಗು. (ಆ) ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯವರ ಕಛೇರಿ, ಜಿಲ್ಲಾ ಪಂಚಾಯತ್ ಕೊಡಗು. (ಇ) ಜಿಲ್ಲಾ ಕೈಗಾರಿಕಾ ಕೇಂದ್ರ, ಕೊಡಗು. (ಈ) ತಾಲ್ಲೂಕು ಪಂಚಾಯತ್ ಕಛೇರಿ, ಕುಶಾಲನಗರ. (ಉ) ಗ್ರಾಮ ಪಂಚಾಯಿತಿ ಕಾರ್ಯಾಲಯ, ಗುಡ್ಡೆಹೊಸೂರು. (ಊ) ಪ್ರಾದೇಶಿಕ ಕಛೇರಿ, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ಸಂಖ್ಯೆ : 93/ಬಿ, ಮೊದಲನೇ ಮಹಡಿ, ವಾರ್ಡ್ ನಂ.7, ಬ್ಲಾಕ್ ನಂ.8, ಸೆಂಟ್ ಜೋಸೆಫ್ ಕಾನ್ವೆಂಟ್ ರಸ್ತೆ, ಮಡಿಕೇರಿ-571201. (ಋ) ಕೇಂದ್ರ ಪರಿಸರ, ಅರಣ್ಯ ಮತ್ತು ಹವಾಮಾನ ಬದಲಾವಣೆ ಮಂತ್ರಾಲಯ, ದಕ್ಷಿಣ ವಲಯ ಕಛೇರಿ, ನಂ.ಇ-3/240, ಕೇಂದ್ರೀಯ ಸದನ, 4ನೇ ಮಹಡಿ, ಇ ಮತ್ತು ಎಫ್ ವಿಂಗ್ಸ್, 17ನೇ ಮುಖ್ಯ ರಸ್ತೆ, 2ನೇ ಬ್ಲಾಕ್, ಕೋರಮಂಗಲ, ಬೆಂಗಳೂರು-560 034. (ೠ) ಸಹಾಯ ಕೇಂದ್ರ, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ನೆಲ ಅಂತಸ್ತು, ನಂ.49, ಪರಿಸರ ಭವನ, ಚರ್ಚ್ ಸ್ಟ್ರೀಟ್, ಬೆಂಗಳೂರು-560 001.

ಸೂಚನೆ: ಯೋಜನಾ ಸ್ಥಳದಲ್ಲಿ ವಾಸವಾಗಿರುವ ಆಸಕ್ತ ನಿವಾಸಿಗಳು, ಪರಿಸರಾಸಕ್ತ ಗುಂಪುಗಳು ಮತ್ತು ಈ ಯೋಜನೆಯಿಂದ ತೊಂದರೆಗೊಳಗಾಗಬಹುದಾದ ಸಾರ್ವಜನಿಕರು ತಮ್ಮ ಸಲಹೆಗಳು, ಅನಿಸಿಕೆಗಳು, ಟೀಕೆಟಿಪ್ಪಣಿಗಳು ಹಾಗು ಅಹವಾಲುಗಳನ್ನು ಮೌಖಿಕ/ಲಿಖಿತ/ಮಿಂಚಂಚೆ ಮುಖಾಂತರ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ/ಅಧ್ಯಕ್ಷರು, ಸಾರ್ವಜನಿಕ ಪರಿಸರ ಸಮಿತಿ (ಜಿಲ್ಲಾಧಿಕಾರಿಗಳು, ಕೊಡಗು ಜಿಲ್ಲೆ) ಇವರಿಗೆ ಈ ಅಧಿಸೂಚನೆ ಪ್ರಕಟವಾದ 30 ದಿನಗಳ ಒಳಗೆ ಸಲ್ಲಿಸತಕ್ಕದ್ದು. ಇಚ್ಛೆಯುಳ್ಳ ಸಾರ್ವಜನಿಕರು ಮೇಲೆ ತಿಳಿಸಿರುವ ದಿನದಂದು ಪರಿಸರ ಸಾರ್ವಜನಿಕ ಸಭೆಯಲ್ಲಿ ಪಾಲ್ಗೊಳ್ಳಬಹುದಾಗಿದೆ. ಹೆಚ್ಚಿನ ವಿವರಗಳನ್ನು ಮಂಡಳಿಯ ಜಾಲತಾಣ : **http://kspcb.karnataka.gov.in** ನಲ್ಲಿ ಪಡೆಯಬಹುದು.

ಸಹಿ/-
ಸದಸ್ಯ ಕಾರ್ಯದರ್ಶಿ

ನಮ್ಮೆಲ್ಲರ ಚಿತ್ತ, ನೈಸರ್ಗಿಕ ಸಂಪನ್ಮೂಲಗಳ ಮಿತಬಳಕೆಯತ್ತ;
ತ್ಯಾಜ್ಯ ಉತ್ಪಾದನೆಯನ್ನು ತಗ್ಗಿಸಿ

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಉಪ ಅರಣ್ಯ ಸಂರಕ್ಷಣಾಧಿಕಾರಿರವರ ಕಚೇರಿ, ಬೃಹತ್ ಬೆಂಗಳೂರು
ಮಹಾನಗರ ಪಾಲಿಕೆ, ಅನೆಕ್ಸ್-3 ಕಟ್ಟಡ, ನರಸಿಂಹರಾಜ ವೃತ್ತ,
ಬೆಂಗಳೂರು - 560 002

ಸಂಖ್ಯೆ: ಉ.ಅ.ಸಂ/ಪಿಆರ್/01/2023-24 **ದಿನಾಂಕ: 10.11.2023**

ತಿದ್ದುಪಡಿ

ವಿಷಯ: ಟೆಂಡರ್‌ಗಳನ್ನು ರದ್ದುಗೊಳಿಸಿರುವ ಬಗ್ಗೆ.

ಉಲ್ಲೇಖ: 1. ಈ ಕಚೇರಿ ಟೆಂಡರ್ ನೋಟಿಫಿಕೇಶನ್ ಉ.ಅ.ಸಂ/ಟೆಂಡರ್/ಪಿಆರ್/06/2023-24 ದಿನಾಂಕ: 31.10.2023 (ಡೆಕ್ಕನ್ ಹೆರಾಲ್ಡ್ ಮತ್ತು ಉದಯವಾಣಿ ಪತ್ರಿಕೆ ಪ್ರಕಟಣೆ ದಿನಾಂಕ: 02.11.2023)

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಅರಣ್ಯ ಘಟಕದ ಉಪ ಅರಣ್ಯ ಸಂರಕ್ಷಣಾಧಿಕಾರಿ ಕಚೇರಿಯಿಂದ ಉಲ್ಲೇಖಿತ (1) ರಂತೆ ಪತ್ರಿಕಾ ಪ್ರಕಟಣೆ ಮೂಲಕ https://kppp.karnataka.gov.in/ ಮುಖಾಂತರ 33 ಟೆಂಡರ್ ಕರೆಯಲಾಗಿದ್ದು, ಸದರಿ Maintenance of Monsoon Plantation (Raised During 2022-23) in BBMP area during the year 2023-24 & 2024-25. ಕಾಮಗಾರಿಗಳ ಟೆಂಡರ್‌ಗಳಲ್ಲಿ ತಾಂತ್ರಿಕ ತೊಂದರೆಗಳು ಇರುವುದರಿಂದ ಸದರಿ 33 ಟೆಂಡರ್‌ಗಳನ್ನು (CANCEL) ರದ್ದುಪಡಿಸಲಾಗಿದೆ. ಸದರಿ ಟೆಂಡರ್‌ಗಳನ್ನು ಹೊಸದಾಗಿ ಕರೆದು ಪ್ರಕಟಣೆ ನೀಡಲಾಗುವುದು.

ಸಹಿ/- ಉಪ ಅರಣ್ಯ ಸಂರಕ್ಷಣಾಧಿಕಾರಿ,
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಬೆಂಗಳೂರು

ಕರ್ನಾಟಕ ಸರ್ಕಾರ

ಅಚ್ಚುಕಟ್ಟು ಅಭಿವೃದ್ಧಿ ಪ್ರಾಧಿಕಾರ

ಕಾವೇರಿ ಜಲಾನಯನ ಯೋಜನೆಗಳು-ಮೈಸೂರು
ಕಾರ್ಯಪಾಲಕ ಅಭಿಯಂತರರವರ ಕಛೇರಿ, ನಂ-2 ವಿಭಾಗ,
ಕಾಜಯೋ. ವಿಜಯನಗರ 1 ನೇ ಹಂತ, ಮೈಸೂರು-17
ದೂರವಾಣಿ ಸಂಖ್ಯೆ : 0821-2414090
ಇ-ಮೇಲ್: eecada2mysore@gmail.com

ಟೆಂಡರ್ ಪ್ರಕಟಣೆ ಸಂಖ್ಯೆ:03/2023-24 ದಿನಾಂಕ:09.11.2023

ಮಂಡ್ಯ ಜಿಲ್ಲಾ ವ್ಯಾಪ್ತಿಯಲ್ಲಿ ಬರುವ ಮಂಡ್ಯ ತಾಲ್ಲೂಕಿನ-05, ಮಳವಳ್ಳಿ ತಾಲ್ಲೂಕಿನ-02, ಶ್ರೀರಂಗಪಟ್ಟಣ ತಾಲ್ಲೂಕಿನ-01 ಹಾಗೂ ಪಾಂಡವಪುರ ತಾಲ್ಲೂಕಿನ-01 ಒಟ್ಟು 09 ಆಯಕಟ್ಟು ರಸ್ತೆ ಕಾಮಗಾರಿಗಳಿಗೆ K/W-1 & K/W-2ರ ಪ್ರಕಾರ **e-portal** ಮೂಲಕ ಐಟಂವಾರು ಟೆಂಡರ್ ಅನ್ನು ಏಕಲಕೋಟೆ ಪದ್ಧತಿಯಲ್ಲಿ ಕರೆಯಲಾಗಿದೆ. ಭಾಗವಹಿಸಲು ಇಚ್ಛಿಸುವ ಗುತ್ತಿಗೆದಾರರು ಟೆಂಡರ್‌ಗೆ ಸಂಬಂಧಿಸಿದಂತೆ ಎಲ್ಲಾ ಮಾಹಿತಿಗಳನ್ನು **https://kppp.karnataka.gov.in** ನಲ್ಲಿ ಪಡೆಯಬಹುದಾಗಿರುತ್ತದೆ. ಟೆಂಡರ್‌ಗಳನ್ನು ಡೌನ್‌ಲೋಡ್ ಮಾಡಿಕೊಳ್ಳುವ ದಿನಾಂಕ: **15.11.2023** ರಿಂದ ಟೆಂಡರ್‌ದಾರರು ಟೆಂಡರ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: **01.12.2023 ಸಂಜೆ 4.00** ಗಂಟೆಯವರೆಗೆ. ಟೆಂಡರ್ ತೆರೆಯುವ ದಿನಾಂಕ: **02.12.2023 ಸಂಜೆ 4.30 ಗಂಟೆಯ ನಂತರ.**

ಸಹಿ/-ಕಾರ್ಯಪಾಲಕ ಅಭಿಯಂತರರು
ನಂ.2 ವಿಭಾಗ, ಕಾಡಾ, ಕಾಜಯೋ, ಮೈಸೂರು.

ವಾಸಾಸಂಇ/ಸನಿ-ಮಂ/ಕೆಎಸ್‌ಎಂಸಿ&ಎ/297/2023-24

CUB ಸಿಟಿ ಯೂನಿಯನ್ ಬ್ಯಾಂಕ್ ಅಮಿಟೆಡ್

TRUST AND EXCELLENCE SINCE 1904

ಸಾಲ ವಸೂಲಾತಿ ಮತ್ತು ನಿರ್ವಹಣಾ ಇಲಾಖೆ,
ಆಡಳಿತ ಕಚೇರಿ ಸಂಖ್ಯೆ 24-ಬಿ, ಗಾಂಧಿನಗರ, ಕುಂಭಕೋಣಂ-612001
Email id : crmd@cityunionbank.in,
ಫೋ: 0435-2432322, ಫ್ಯಾಕ್ಸ್ : 0435-2431746

ಮರು ಟೆಂಡರ್ ಕಂ ಏಲಂ ಮಾರಾಟ ನೋಟೀಸು SARFAESI ACT 2002 ನಿಯಮಾವಳಿ ಅಡಿಯಲ್ಲಿ

ಸಿಟಿ ಯೂನಿಯನ್ ಬ್ಯಾಂಕ್ ಲಿಮಿಟೆಡ್‌ಗೆ ಅಡಮಾನಗೊಳಿಸಲಾಗಿರುವ ಈ ಕೆಳಗಿನ ಆಸ್ತಿಯನ್ನು/ಗಳನ್ನು ಬ್ಯಾಂಕ್‌ನ ಅಧಿಕೃತ ಅಧಿಕಾರಿಯವರು ಸರ್ಫೇಸಿ ಕಾಯಿದೆ 2002ರ ಅಡಿಯಲ್ಲಿ ಭದ್ರತಾ ಆಸಕ್ತಿ (ಜಾರಿ) ನಿಯಮಗಳು, 2002 ರ ನಿಯಮ 8 (6) ಮತ್ತು 9ರ ಅಡಿಯಲ್ಲಿ **07-11-2023**ಕ್ಕೆ ಅನ್ವಯವಾಗುವಂತೆ **ರೂ. 23,63,963/- (ಇಪ್ಪತ್ತಮೂರು ಲಕ್ಷದ ಅರುವತ್ತಮೂರು ಸಾವಿರದ ಒಂಬೈನೂರ ಅರುವತ್ತ ಮೂರು ರೂಪಾಯಿಗಳು ಮಾತ್ರ)** ಮೊತ್ತದ ವಸೂಲಾತಿಗಾಗಿ ಟೆಂಡರ್-ಕಮ್-ಸಾರ್ವಜನಿಕ ಹರಾಜಿನಲ್ಲಿ ಮಾರಾಟ ಮಾಡಲಿದ್ದಾರೆ. ಜೊತೆಗೆ **08-11-2023**ರಿಂದ ಮುಂದಿನ ಬಡ್ಡಿ ಹಾಗೂ ಸಾಲಗಾರರು/ ಜಾಮೀನುದಾರರಿಂದ ಬ್ಯಾಂಕ್‌ಗೆ ಸಲ್ಲಬೇಕಾಗಿರುವ ಇತರ ವೆಚ್ಚಗಳು ಯಾವುದೇ ಇತರ ಬಾಕಿಗಳಿಗೆ ಬಡ್ಡಿಯನ್ನು ವಿಧಿಸಲಾಗುತ್ತದೆ. ಸಾಲಗಾರರು/ಜಾಮೀನುದಾರರು: **ಸಂ.1) ಮೆಸರ್ಸ್ ಎಸ್. ವಿ. ಸಿಲ್ಕ್ಸ್, ನಂ. 85/3703, ಗಾಣಿಗರಪೇಟೆ, ದೊಡ್ಡಬಳ್ಳಾಪುರ, ಕರ್ನಾಟಕ- 561203, ಸಂ.2) ಶ್ರೀ ವಿಶ್ವನಾಥ್, ಶ್ರೀ ಶಿವಣ್ಣರವರ ಮಗ, ಡಿ. ನಂ. 3790, 28ನೇ ವಾರ್ಡ್, ತಾಲೂಕು ಕಚೇರಿ ರಸ್ತೆ, ದೇಶದಪೇಟೆ, ಹಳೆ ಎಸ್‌ಆರ್‌ಎಂ ಹಿಂದುಗಡೆ, ದೊಡ್ಡಬಳ್ಳಾಪುರ - 561203, ಸಂ.3) ಶ್ರೀಮತಿ, ಕನ್ಯಾಕುಮಾರಿ ಸಿಪಿ., ಶ್ರೀ ವಿಶ್ವನಾಥ್‌ರವರ ಪತ್ನಿ, ಡಿ. ನಂ.3790, 28ನೇ ವಾರ್ಡ್, ತಾಲೂಕು ಕಚೇರಿ ರಸ್ತೆ, ದೇಶದಪೇಟೆ, ಹಳೆಯ ಎಸ್‌ಆರ್‌ಎಂ ಹಿಂದುಗಡೆ, ದೊಡ್ಡಬಳ್ಳಾಪುರ-561203.**

ನಮ್ಮ ಬ್ಯಾಂಕಿಗೆ ಅಡಮಾನಗೊಳಿಸಲಾಗಿರುವ ಸ್ಥಿರಾಸ್ತಿ.

ಶೆಡ್ಯೂಲ್-ಎ: (ಶ್ರೀ ವಿಶ್ವನಾಥ್, ಶ್ರೀ ಶಿವಣ್ಣರವರ ಮಗ-ಇವರ ಒಡೆತನದ ಆಸ್ತಿ)

4ನೇ ವಾರ್ಡ್, ದೇಶದಪೇಟೆ, ದೊಡ್ಡಬಳ್ಳಾಪುರ 561203-ಇಲ್ಲಿ ನೆಲೆಗೊಂಡಿರುವ ಹಳೆಯ ಖಾತಾ ನಂ. 2461, ಪ್ರಸಕ್ತ ಖಾತಾ ನಂ. 85/79/3697/1, ಪ್ರಸಕ್ತ ಖಾತಾ ಎಸ್‌ಎಲ್ ನಂ. 350, ಪೂರ್ವದಿಂದ ಪಶ್ಚಿಮಕ್ಕೆ 8 ಅಡಿಗಳು ಮತ್ತು ಉತ್ತರದಿಂದ ದಕ್ಷಿಣಕ್ಕೆ 45 ಅಡಿಗಳ ಅಳತೆಯನ್ನು ಹೊಂದಿದ್ದು, ಪೂರ್ವದಲ್ಲಿ-ಐಟಂ ನಂ. 2ರ ಆಸ್ತಿ, ಪಶ್ಚಿಮದಲ್ಲಿ- ಚೆನ್ನಬಸವಾರಾಧ್ಯ ಮತ್ತು ಜಯಣ್ಣರವರಿಗೆ ಸೇರಿದ ಆಸ್ತಿ, ಉತ್ತರದಲ್ಲಿ- ಮಸೀದಿಯ ಕಾಂಪೌಂಡ್, ದಕ್ಷಿಣದಲ್ಲಿ-ರಸ್ತೆ ಮೊದಲಾದ ಗಡಿಗಳಿಂದ ಸುತ್ತುವರಿದಿದೆ.

ಶೆಡ್ಯೂಲ್-ಬಿ: (ಶ್ರೀ ವಿಶ್ವನಾಥ್, ಶ್ರೀ ಶಿವಣ್ಣರವರ ಮಗ-ಇವರ ಒಡೆತನದ ಆಸ್ತಿ)

4ನೇ ವಾರ್ಡ್, ದೇಶದಪೇಟೆ, ದೊಡ್ಡಬಳ್ಳಾಪುರ 561203-ಇಲ್ಲಿ ನೆಲೆಗೊಂಡಿರುವ ಹಳೆ ಖಾತೆ ನಂ. 2459, ಪ್ರಸಕ್ತ ಖಾತಾ ನಂ. 80/75/3694/1, ಪ್ರಸಕ್ತ ಖಾತಾ ಎಸ್‌ಎಲ್. ನಂ. 349, ಪೂರ್ವದಿಂದ-ಪಶ್ಚಿಮಕ್ಕೆ 22 ಅಡಿ ಮತ್ತು ಉತ್ತರದಿಂದ-ದಕ್ಷಿಣಕ್ಕೆ 33 ಅಡಿಗಳ ಅಳತೆಯನ್ನು ಹೊಂದಿದ್ದು, ಪೂರ್ವದಲ್ಲಿ- ಗಜೇಂದ್ರ, ವೀರಭದ್ರಾರಾಧ್ಯ ಮತ್ತು ಇತರರ ಆಸ್ತಿಗಳು, ಪಶ್ಚಿಮದಲ್ಲಿ- ಐಟಂ ನಂ. 1ರ ಆಸ್ತಿ, ಉತ್ತರದಲ್ಲಿ-ಐಟಂ ನಂ. 3ರ ಆಸ್ತಿ, ದಕ್ಷಿಣದಲ್ಲಿ- ರಸ್ತೆ ಮೊದಲಾದ ಗಡಿಗಳಿಂದ ಸುತ್ತುವರಿದಿದೆ.

ಶೆಡ್ಯೂಲ್-ಸಿ: (ಶ್ರೀ ವಿಶ್ವನಾಥ್, ಶ್ರೀ ಶಿವಣ್ಣರವರ ಮಗ-ಇವರ ಒಡೆತನದ ಆಸ್ತಿ)

4ನೇ ವಾರ್ಡ್, ದೇಶದಪೇಟೆ, ದೊಡ್ಡಬಳ್ಳಾಪುರ 561203-ಇಲ್ಲಿ ನೆಲೆಗೊಂಡಿರುವ ಹಳೆ ಖಾತಾ ನಂ. 3694/3695/3697/3698/2, ಪ್ರಸಕ್ತ ಖಾತಾ ನಂ. 77/74/3694, ಪ್ರಸಕ್ತ ಖಾತಾ ಎಸ್‌ಎಲ್ ನಂ. 348, ಪೂರ್ವದಿಂದ ಪಶ್ಚಿಮಕ್ಕೆ 15 ಅಡಿ, ಉತ್ತರದಿಂದ ದಕ್ಷಿಣಕ್ಕೆ 15 ಅಡಿಗಳ ಅಳತೆಯನ್ನು ಹೊಂದಿದ್ದು, ಪೂರ್ವದಲ್ಲಿ- ಜಯಣ್ಣ ಮತ್ತು ಇತರರ ಆಸ್ತಿಗಳು, ಪಶ್ಚಿಮದಲ್ಲಿ-ಐಟಂ ನಂ.1ರ ಆಸ್ತಿ, ಉತ್ತರದಲ್ಲಿ- ಮಸೀದಿಯ ಕಾಂಪೌಂಡ್, ದಕ್ಷಿಣದಲ್ಲಿ- ಐಟಂ ನಂ. 2ರ ಆಸ್ತಿ ಮೊದಲಾದ ಗಡಿಗಳಿಂದ ಸುತ್ತುವರಿದಿದೆ. ಜಮೀನಿನ ಒಟ್ಟು ವಿಸ್ತೀರ್ಣ 1,311 ಚ.ಅ. ಇದ್ದು, ಜಮೀನಿನಲ್ಲಿ ಕಟ್ಟಲಾಗಿರುವ ನೆಲಮಹಡಿ ಹಾಗೂ ಮೊದಲ ಮಹಡಿಯ ಒಂದು ಆರ್‌ಸಿಸಿ ವಸತಿ ಕಟ್ಟಡವನ್ನು ಒಳಗೊಂಡಿದೆ.

ಕಾಯ್ದಿರಿಸಿದ ಬೆಲೆ: ರೂ 30,00,000/
(ಮೂವತ್ತು ಲಕ್ಷ ರೂಪಾಯಿಗಳು ಮಾತ್ರ) ಶೆಡ್ಯೂಲ್ ಎ, ಬಿ ಮತ್ತು ಸಿ ಗಾಗಿ

ಹರಾಜಿನ ವಿವರಗಳು

ಮರು ಟೆಂಡರ್ ಕಂ ಹರಾಜು ಮಾರಾಟ ದಿನಾಂಕ	ಸ್ಥಳ:
20-12-2023	**ಸಿಟಿ ಯೂನಿಯನ್ ಬ್ಯಾಂಕ್ ಲಿಮಿಟೆಡ್, ದೊಡ್ಡಬಳ್ಳಾಪುರ ಶಾಖೆ,** 1108/1116/925, ಹುಂಗಿ ಕಾಂಪ್ಲೆಕ್ಸ್, ಸಿನೆಮಾ ಸ್ಟ್ರೀಟ್, ದೊಡ್ಡಬಳ್ಳಾಪುರ, ಬೆಂಗಳೂರು ನಗರ, ಕರ್ನಾಟಕ -561203. ದೂರವಾಣಿ ನಂ. 080-27622082 ಸೆಲ್ ನಂ. 9341673937.

ಟೆಂಡರ್-ಕಮ್-ಹರಾಜು ಮಾರಾಟದ ನಿಯಮಗಳು ಮತ್ತು ಷರತ್ತುಗಳು:

(1) ಉದ್ದೇಶಿತ ಬಿಡ್ದಾರರು ಹರಾಜಿಗೆ ಖುದ್ದಾಗಿ ಹಾಜರಾಗಬೇಕು ಮತ್ತು ವೈಯಕ್ತಿಕವಾಗಿ ಭಾಗವಹಿಸಬೇಕು ಮತ್ತು ಅವನು/ಅವಳು ತನಗಾಗಿಯೇ ಬಿಡ್ ಮಾಡುತ್ತಿದ್ದಾನೆ ಎಂಬುದಕ್ಕೆ ಲಿಖಿತವಾಗಿ ಘೋಷಣೆಯನ್ನು ನೀಡಬೇಕು. (2) ಉದ್ದೇಶಿತ ಬಿಡ್‌ದಾರರು ಟೆಂಡರ್‌ಫಾರ್ಮ್‌ಗಳನ್ನು **ಮ್ಯಾನೇಜರ್, ಸಿಟಿ ಯೂನಿಯನ್ ಬ್ಯಾಂಕ್ ಲಿಮಿಟೆಡ್, ದೊಡ್ಡಬಳ್ಳಾಪುರ ಶಾಖೆ, 1108/1116/925, ಹುಂಗಿ ಕಾಂಪ್ಲೆಕ್ಸ್, ಸಿನೆಮಾ ಸ್ಟ್ರೀಟ್, ದೊಡ್ಡಬಳ್ಳಾಪುರ, ಬೆಂಗಳೂರು ನಗರ, ಕರ್ನಾಟಕ -561203**-ಇವರಿಂದ ಪಡೆಯಬಹುದು. (3) ಉದ್ದೇಶಿತ ಬಿಡ್‌ದಾರರು ನಿಗದಿಪಡಿಸಲಾಗಿರುವ ನಮೂನೆಯಲ್ಲಿ ತಮ್ಮ ಬಿಡ್‌ಗಳನ್ನು ಮುಚ್ಚಿದ ಲಕೋಟೆಯಲ್ಲಿ **ಅಧಿಕೃತ ಅಧಿಕಾರಿ, ಸಿಟಿ ಯೂನಿಯನ್ ಬ್ಯಾಂಕ್ ಲಿ.,** ಇವರಿಗೆ ಕಾಯ್ದಿರಿಸಿದ ಬೆಲೆಯ **10%** ಇಎಂಡಿ ಯ ಪೇ ಆರ್ಡರ್/ಡಿಮಾಂಡ್ ಡ್ರಾಫ್ಟ್‌ನೊಂದಿಗೆ ಟೆಂಡರ್-ಕಮ್-ಹರಾಜು ಮಾರಾಟದ ದಿನಾಂಕದಂದು ಮಧ್ಯಾಹ್ನ **12.00** ಗಂಟೆಗೆ ಅಥವಾ ಅದಕ್ಕೂ ಮೊದಲು ಸಲ್ಲಿಸಲು ಸೂಚಿಸಲಾಗಿದೆ. (4) ಆಸ್ತಿ ಮತ್ತು ಇತರ ವಿವರಗಳ ಪರಿಶೀಲನೆಗಾಗಿ, ಉದ್ದೇಶಿತ ಖರೀದಿದಾರರು **ದೂರವಾಣಿ ನಂ. 080-27622082 ಸೆಲ್ ನಂ. 9341673937**ನ್ನು ಸಂಪರ್ಕಿಸಬಹುದು. (5) ಆಸ್ತಿಯನ್ನು/ಗಳನ್ನು "ಎಲ್ಲಿದೆಯೋ ಅಲ್ಲಿ", "ಹೇಗಿದೆಯೋ ಹಾಗೆ", "ಇದ್ದಲ್ಲಿಯೇ ಇರುವಂತೆ", "ಯಥಾಸ್ಥಿತಿಯಲ್ಲಿ" ಮಾರಾಟ ಮಾಡಲಾಗುತ್ತದೆ. (6) ಮೊಹರು ಮಾಡಿದ ಟೆಂಡರ್‌ಗಳನ್ನು ಉದ್ದೇಶಿತ ಬಿಡ್‌ದಾರರ ಸಮ್ಮುಖದಲ್ಲಿ ಟೆಂಡರ್-ಕಮ್-ಹರಾಜು ಮಾರಾಟದ ದಿನಾಂಕದಂದು ಅಪರಾಹ್ನ **01.00** ಗಂಟೆಗೆ ತೆರೆಯಲಾಗುವುದು. ಸಾಮಾನ್ಯವಾಗಿ ಮಾರಾಟವು ಮುಚ್ಚಿದ ಟೆಂಡರ್‌ಗಳ ಮೂಲಕ ನಡೆಯುವುದಾದರೂ, ಅಧಿಕೃತ ಅಧಿಕಾರಿಯು ತನ್ನ ಸ್ವಂತ ವಿವೇಚನೆಯಿಂದ, ಮುಚ್ಚಿದ ಟೆಂಡರ್ ಪ್ರಕ್ರಿಯೆಯಲ್ಲಿ ಸ್ವೀಕರಿಸಿದ ಬಿಡ್‌ಗಿಂತ ಹೆಚ್ಚಿನ ಬಿಡ್‌ಅನ್ನು ಉಲ್ಲೇಖಿಸಲು ಬಯಸುವ ಆಸಕ್ತಿ ಹೊಂದಿರುವ ಬಿಡ್‌ದಾರರ ನಡುವೆ ಬಹಿರಂಗ ಹರಾಜನ್ನು ನಡೆಸಬಹುದು. ಅಂತಹ ಪ್ರಕ್ರಿಯೆಯಲ್ಲಿ, ಹೆಚ್ಚಿನ ಬಿಡ್ ಮಾಡುವ ವ್ಯಕ್ತಿಗೆ ಮಾರಾಟ ಮಾಡಲಾಗುತ್ತದೆ. ಆದಾಗ್ಯೂ, ಮಾರಾಟವು ಸಿಟಿ ಯೂನಿಯನ್ ಬ್ಯಾಂಕ್ ಲಿಮಿಟೆಡ್‌ನ ದೃಢೀಕರಣಕ್ಕೆ ಒಳಪಟ್ಟಿರುತ್ತದೆ. (7) ಯಶಸ್ವಿ ಬಿಡ್‌ದಾರರು ಮಾರಾಟವನ್ನು ಪೂರ್ಣಗೊಳಿಸಿದ ತಕ್ಷಣ ಮಾರಾಟದ ಮೊತ್ತದ **25%** (ಪಾವತಿಸಿದ ಇಎಂಡಿ ಸೇರಿದಂತೆ)ವನ್ನು ಮತ್ತು ಮಾರಾಟದ ದೃಢೀಕರಣದ ದಿನಾಂಕದಿಂದ **15** ದಿನಗಳೊಳಗೆ **75%** ಬಾಕಿ ಮೊತ್ತವನ್ನು ಪಾವತಿಸಬೇಕು, ವಿಫಲವಾದರೆ ಆರಂಭಿಕ ಠೇವಣಿಯ **25** ರಷ್ಟನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವುದು. (8) ಇಲ್ಲಿ ನಿಗದಿಪಡಿಸಿದ ಸಮಯದ ಮಿತಿಯೊಳಗೆ ಸಂಪೂರ್ಣ ಮಾರಾಟದ ಪರಿಗಣನೆಯ ಸ್ವೀಕೃತಿಯ ಅನಂತರ ಮಾತ್ರ ಯಶಸ್ವಿ ಖರೀದಿದಾರನ ಪರವಾಗಿ ಅಧಿಕೃತ ಅಧಿಕಾರಿಯಿಂದ ಮಾರಾಟ ಪ್ರಮಾಣಪತ್ರವನ್ನು ನೀಡಲಾಗುತ್ತದೆ. (9) ಯಶಸ್ವಿ ಖರೀದಿದಾರನು ಕಾನೂನಿನ ಅಡಿಯಲ್ಲಿ ಅನ್ವಯವಾಗುವಂತೆ ಸ್ಟ್ಯಾಂಪ್ ಡ್ಯೂಟಿ, ನೋಂದಣಿ ಶುಲ್ಕ ಇತ್ಯಾದಿ ಸಾಗಾಣೆಗೆ ಪಾವತಿಸಬೇಕಾದ ಶುಲ್ಕ/ಶುಲ್ಕಗಳನ್ನು ಭರಿಸತಕ್ಕದ್ದು. (10) ಯಶಸ್ವಿ ಬಿಡ್‌ದಾರನು ಶಾಸನಬದ್ಧ ಬಾಕಿಗಳನ್ನು (ಕಾನೂನುಬದ್ಧ ಮನೆತೆರಿಗೆ, ವಿದ್ಯುತ್ ಶುಲ್ಕಗಳು ಮತ್ತು ಇತರ ಬಾಕಿಗಳು), ಟಿಡಿಎಸ್, ಜಿಎಸ್‌ಟಿ ಯಾವುದಾದರೂ ಇದ್ದರೆ, ಸರಕಾರ, ಸರಕಾರದ ಅಧೀನ ಮತ್ತು ಸ್ಥಳೀಯ ಸಂಸ್ಥೆಗಳಿಗೆ ಪಾವತಿಸಬೇಕು. (11) ಅಧಿಕೃತ ಅಧಿಕಾರಿಯವರು ಬಿಡ್‌ಗಳನ್ನು ಸ್ವೀಕರಿಸಲು ಅಥವಾ ತಿರಸ್ಕರಿಸಲು ಅಥವಾ ಯಾವುದೇ ಕಾರಣವನ್ನು ನೀಡದೆ ಮಾರಾಟವನ್ನು ಮುಂದೂಡಲು ಅಥವಾ ರದ್ದುಗೊಳಿಸಲು ಎಲ್ಲಾ ಅಧಿಕಾರಗಳನ್ನು ಹೊಂದಿರುತ್ತಾರೆ.

ಸ್ಥಳ : ಕುಂಭಕೋಣಂ. ದಿನಾಂಕ: 09-11-2023 **ಅಧಿಕೃತ ಅಧಿಕಾರಿ**

ನೋಂದಣಿ ಕಚೇರಿ: 149, ಟಿ.ಎಸ್.ಆರ್.(ಬಿಗ್) ಸ್ಟ್ರೀಟ್, ಕುಂಭಕೋಣಂ, ತಂಜಾವೂರು ಜಿಲ್ಲೆ,
ತಮಿಳುನಾಡು, 612001, CIN-L 65110TN1904PLC001287, **ಫೋ:** 0435-2402322
ಫ್ಯಾಕ್ಸ್ : 0435-2431746, **ವೆಬ್‌ಸೈಟ್:** www.cityunionbank.com

---

ಕಾವೇರಿ ನೀರಾವರಿ ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಒಂದು ಉದ್ಯಮ)
ಕಾರ್ಯಪಾಲಕ ಅಭಿಯಂತರರವರ ಕಛೇರಿ, ಎಂ.ಪಿ. ವಿಭಾಗ, ರಾಮನಗರ.
ದೂ. : 080-2727 1259. ಇ-ಮೇಲ್ : eempdrmgm@gmail.com

ಟೆಂಡರ್ ಪ್ರಕಟಣೆ ಸಂಖ್ಯೆ : 06/2023-24 **ದಿನಾಂಕ : 10-11-2023**

ಟೆಂಡರ್ ಪ್ರಕಟಣೆ

ಕಾವೇರಿ ನೀರಾವರಿ ನಿಗಮ ನಿಯಮಿತದ ಅಡಿಯಲ್ಲಿ ಅರ್ಹ ಗುತ್ತಿಗೆದಾರರಿಂದ **https://kppp.karnataka.gov.in** ಮುಖಾಂತರ 2701 ಲೆಕ್ಕ ಶೀರ್ಷಿಕೆಯಡಿಯಲ್ಲಿ ಮಾನವ ಸಂಪನ್ಮೂಲ ಸರಬರಾಜು ಮಾಡುವ **(Providing Outsourcing Staff)** ವಿವಿಧ ಮೊತ್ತದ ಕಾಮಗಾರಿಗಳ ಟೆಂಡರ್ ಆಹ್ವಾನಿಸಲಾಗಿರುತ್ತದೆ. **ಕಾಮಗಾರಿಗಳ ಟೆಂಡರ್ ಸಲ್ಲಿಸಲು ಕಡೆಯ ದಿನಾಂಕ : 27-11-2023, ತಾಂತ್ರಿಕ ಬಿಡ್ ತೆರೆಯುವ ದಿನಾಂಕ : 28-11-2023, ಆರ್ಥಿಕ ಬಿಡ್ ತೆರೆಯುವ ದಿನಾಂಕ : 06-12-2023, ಹಾಗೂ ಇ.ಎಂ.ಡಿ. ಮುಂತಾದ ಇತರೆ ಮಾಹಿತಿಗಳನ್ನು https://kppp.karnataka.gov.in ಯಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. ಹೆಚ್ಚಿನ ಮಾಹಿತಿಗಾಗಿ ಕಛೇರಿ ವೇಳೆಯಲ್ಲಿ ಸಂಪರ್ಕಿಸಿ ಪಡೆಯಬಹುದಾಗಿರುತ್ತದೆ.**

ಸಹಿ/- ಕಾರ್ಯಪಾಲಕ ಅಭಿಯಂತರರು,
ಕಾ.ನೀ.ನಿ.ನಿ., ಎಂ.ಪಿ. ವಿಭಾಗ, ರಾಮನಗರ.

ಡಿಐಪಿಆರ್/ರಾಮನಗರ/278/ಮಣಿಪಾಲ್/2023-24

ಕುವೆಂಪು ವಿಶ್ವವಿದ್ಯಾಲಯ

Vishwavidyanilaya Karyalaya, Exam Branch, Jnana Sahyadri, Shankaraghatta - 577 451

No:KU:EB:SP-1:DIS:2899:2023-24:CALL-2 Date: 02-11-2023

ಮರು-ಟೆಂಡರ್ ಪ್ರಕಟಣೆ

Re e-Tenders are invited from eligible Tenderers for quoting Item Rates for Disposable Used Answer Booklets and Other Waste Papers at Examination Branch, Kuvempu University. Details can be obtained from this office and e-procurement portal https://kppp.karnataka.gov.in and The Tenderers should apply filled applications through e-procurement. For more information contact Phone no.08282-256166.

Sd/- REGISTRAR(Evaluation)

ವಾ.ಸಾ.ಸಂ.ಇ/ಕೆಎಸ್‌ಎಂಸಿಎ/ಶಿ/51/11/23-24/749

ಕರ್ನಾಟಕ ಸರ್ಕಾರ

ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ ಲೋಕೋಪಯೋಗಿ ಇಲಾಖೆ ಹಾಸನ ವಿಭಾಗ, ಹಾಸನ.

ಸಂಖ್ಯೆ: 12 :ಕಾಇಂ:ಲೋಇ:ಹಾವಿ:ಕಿಇಂ-2:2023-24 ದಿನಾಂಕ: 09.11.2023.

ಅಲ್ಪಾವಧಿ ಟೆಂಡರ್ ಪ್ರಕಟಣೆ

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕ ಆದ್ಯಾದೇಶ 1999-2000ರ ಪ್ರಕಾರ ಆಕ್ಟ್ 2000ರ ನಿಯಮದಂತೆ ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್ ಕೆ.ಡಬ್ಲ್ಯೂ-4 ನಿಯಮದನ್ವಯ ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿತರಾದ ಅರ್ಹ ದರ್ಜೆ ಗುತ್ತಿಗೆದಾರರಿಂದ ಹಾಸನ ವಿಭಾಗ ವ್ಯಾಪ್ತಿಯ ಒಟ್ಟು 02 ಸಂಖ್ಯೆ ಕಾಮಗಾರಿಗಳಿಗಾಗಿ (2 ನೇ ಕರೆ) ಟೆಂಡರ್ ಕರೆಯಲಾಗಿದೆ. ಸದರಿ ಟೆಂಡರ್‌ನಲ್ಲಿನ ಎರಡು ಕಾಮಗಾರಿ ಮೊತ್ತ ರೂ.495.00 ಲಕ್ಷ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಅರ್ಜಿ ಸಲ್ಲಿಸಲು ನಿಗಧಿಪಡಿಸಿರುವ ಕಡೆಯ ದಿನಾಂಕ. 27.11.2023 16.00 ಗಂಟೆ. ಹೆಚ್ಚಿನ ವಿವರಗಳಿಗಾಗಿ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ https://kppp.karnataka.gov.in ಮೂಲಕ ನೋಡುವುದು ಅಥವಾ ಈ ಕಛೇರಿಯ ಸಹಾಯಕ ದೂರವಾಣಿ ಸಂಖ್ಯೆ: 08172-268437 ರಿಂದ ಕಛೇರಿಯ ವೇಳೆಯಲ್ಲಿ ಮಾಹಿತಿ ಪಡೆಯಬಹುದಾಗಿದೆ.

ಸಹಿ/-ಕಾರ್ಯಪಾಲಕ ಇಂಜಿನಿಯರ್, ಲೋಇ ಹಾಸನ ವಿಭಾಗ,
ಹಾಸನ.

ವಾಸಾಸಂಇ/ಹಿಸನಿ/ಹಾಸನ/492/ಕೆಎಸ್‌ಎಂಸಿಎ/496/2023-24

ICICI Home Finance

ಕಾರ್ಪೊರೇಟ್ ಕಚೇರಿ: ಐಸಿಐಸಿಐ ಹೋಮ್ ಫೈನಾನ್ಸ್ ಕಂಪನಿ ಲಿಮಿಟೆಡ್, ಐಸಿಐಸಿಐ ಎಚ್‌ಎಫ್‌ಸಿ ಟವರ್, ಅಂಧೇರಿ-ಕುರ್ಲಾ ರಸ್ತೆ, ಅಂಧೇರಿ (ಪೂರ್ವ), ಮುಂಬೈ-400059, ಭಾರತ.
ಶಾಖಾ ಕಚೇರಿ: 2ನೇ ಮಹಡಿ, ಸಪ್ತ ಸ್ವರ ಕಾಂಪ್ಲೆಕ್ಸ್, ಪ್ಯಾಲೇಸ್ ಹೋಂಡಾ ಶೋ ರೂಂ ಪಕ್ಕ, ಫಯರ್ ಬ್ರಿಗೇಡ್‌ನ ಬಳಿ, ಕಾಂತರಾಜ್ ಅರಸ್ ರಸ್ತೆ, ಸರಸ್ವತಿಪುರಂ, ಮೈಸೂರು-570009.
ಶಾಖಾ ಕಚೇರಿ: 1ನೇ ಮಹಡಿ, ನಂ 181, ಸುಂದರಿ ಆರ್ಮಡೇಲ್, ವೈಟ್‌ಫೀಲ್ಡ್ ಮುಖ್ಯ ರಸ್ತೆ, ವೈಟ್‌ಫೀಲ್ಡ್, ಬೆಂಗಳೂರು-560066.

(ನಿಯಮ 8(6)ರ ನಿಬಂಧನೆಯನ್ನು ನೋಡಿ)

ಸ್ಥಿರ ಸ್ವತ್ತುಗಳ ಮಾರಾಟಕ್ಕಾಗಿ ನೋಟೀಸು

ಭದ್ರತಾ ಹಿತಾಸಕ್ತಿ (ಜಾರಿ) ನಿಯಮಗಳು, 2002ರ ಓದಲಾದ ನಿಯಮ 8 (6)ರ ನಿಬಂಧನೆಯೊಂದಿಗೆ, ಹಣಕಾಸು ಸ್ವತ್ತುಗಳ ಭದ್ರತೀಕರಣ ಮತ್ತು ಪುನರ್ನಿರ್ಮಾಣ ಹಾಗೂ ಭದ್ರತಾ ಹಿತಾಸಕ್ತಿ ಕಾಯ್ದೆಯ ಅನುಷ್ಠಾನ, 2002ರ ಅಡಿಯಲ್ಲಿ ಸ್ಥಿರ ಸ್ವತ್ತುಗಳ ಮಾರಾಟಕ್ಕಾಗಿ ಇ-ಹರಾಜು ಮಾರಾಟದ ನೋಟೀಸು.

ಈ ನೋಟೀಸಿನ ಮೂಲಕ ಸಾಮಾನ್ಯವಾಗಿ ಸಾರ್ವಜನಿಕರಿಗೆ ಮತ್ತು ನಿರ್ದಿಷ್ಟವಾಗಿ ಸಾಲಗಾರ(ರು) ಮತ್ತು ಖಾತರಿದಾರರಿಗೆ ತಿಳಿಸುವುದೇನೆಂದರೆ, ಈ ಕೆಳಗೆ ವಿವರಿಸಿದ ಸ್ಥಿರ ಆಸ್ತಿಯನ್ನು ಸಾಲಗಾರರು/ಖಾತರಿದಾರರು ಸಂರಕ್ಷಿತ ಸಾಲದಾತರಿಗೆ ಅಡಮಾನಕ್ಕೆ /ಹೊಣೆಗಾರಿಕೆಗೆ ನೀಡಿದ್ದಾರೆ. ಅದು ಐಸಿಐಸಿಐ ಹೋಮ್ ಫೈನಾನ್ಸ್ ಕಂಪನಿ ಲಿಮಿಟೆಡ್‌ನ ಅಧಿಕೃತ ಅಧಿಕಾರಿಯವರ ಭೌತಿಕ ಸ್ವಾಧೀನ ಹಂತದಲ್ಲಿದ್ದು, ಅದನ್ನು "ಹೇಗಿದೆಯೋ ಹಾಗೆ", "ಎಲ್ಲಿದೆಯೋ ಅಲ್ಲಿ", "ಯಥಾಸ್ಥಿತಿಯಲ್ಲಿ" ಈ ಕೆಳಗೆ ನೀಡಿರುವ ವಿವರಣೆಗಳ ಪ್ರಕಾರ ಮಾರಾಟ ಮಾಡಲಾಗುತ್ತದೆ.

ಕ್ರ. ಸಂ.	ಸಾಲಗಾರ(ರು), ಸಹ ಸಾಲಗಾರರು / ಖಾತರಿದಾರರ / ಕಾನೂನು ಉತ್ತರಾಧಿಕಾರಿಗಳ ಹೆಸರು. ಸಾಲ ಖಾತೆ ನಂ.	ಸಂರಕ್ಷಿತ ಸ್ವತ್ತು(ಗಳ) ವಿವರಗಳು, ಜೊತೆಗೆ ತಿಳಿದಿರುವ ಹೊರೆಗಳು ಯಾವುದಾದರೂ ಇದ್ದಲ್ಲಿ	ಬಾಕಿ ಮೊತ್ತ	ಕಾದಿರಿಸಿದ ಬೆಲೆ/ ಮುಂಗಡ ಹಣ ಠೇವಣಿ	ಆಸ್ತಿ ಪರಿಶೀಲನೆಯ ದಿನಾಂಕ ಮತ್ತು ಸಮಯ	ಹರಾಜಿನ ದಿನಾಂಕ ಮತ್ತು ಸಮಯ
(ಎ)	(ಬಿ)	(ಸಿ)	(ಡಿ)	(ಇ)	(ಎಫ್)	(ಜಿ)
1.	ಗಂಗಾಧರ್(ಸಾಲಗಾರ), ರಾಣಿ ಮುನ್ನಿಸ್ವಾಮಿ (ಸಹ ಸಾಲಗಾರ), ಸಾಲ ಖಾತೆ ನಂ. UHMYS00001364482 & LHMYS00001317636	1570 ಎ ಬ್ಲಾಕ್, ಮಿಗ್-2 ನೆಲಮಹಡಿ, 1570, 4ನೇ ಹಂತ, ಶಾರದಾದೇವಿ ನಗರ, ಬೋಗಾದಿ, 5ನೇ ಹಂತ, ಲೇಔಟ್1570, ಮೈಸೂರು- 570022, ಮೈಸೂರು, ಕರ್ನಾಟಕ-570022.	ರೂ. 33,16,617/- ಅಕ್ಟೋಬರ್ 30, 2023.	ರೂ. 34,06,725/- ರೂ. 3,40,680/-	ಡಿಸೆಂಬರ್ 04, 2023ರಂದು ಪೂರ್ವಾಹ್ನ 11:00 ರಿಂದ ಅಪರಾಹ್ನ 3:00	ಡಿಸೆಂಬರ್ 19, 2023ರಂದು ಅಪರಾಹ್ನ 02:00 ರಿಂದ 03:00
2.	ಯೋಗೇಂದ್ರ ಪಿ. (ಸಾಲಗಾರ), ಎ.ಸಿ. ಆಶಾ (ಸಹ-ಸಾಲಗಾರ) ಸಾಲ ಖಾತೆ ನಂ. NHBNG00001294089	ಸೈಟ್ ನಂ. 126/6 ಖಾತಾ ನಂ. 198, ದಾಸರಹಳ್ಳಿ, ಬೆಂಗಳೂರು - 560057, ನಂ. 1565, 15ನೇ ಕ್ರಾಸ್, ಪ್ರಶಾಂತ್ 3/1 ಬೆಂಗಳೂರು-560057.	ರೂ. 78,22,589/- ಅಕ್ಟೋಬರ್ 30, 2023	ರೂ. 80,32,500/- ರೂ. 8,03,250/-	ಡಿಸೆಂಬರ್ 04, 2023ರಂದು ಪೂರ್ವಾಹ್ನ 11:00 ರಿಂದ ಅಪರಾಹ್ನ 03:00	ಡಿಸೆಂಬರ್ 19, 2023ರಂದು ಅಪರಾಹ್ನ 02:00 ರಿಂದ 03:00

ಆನ್‌ಲೈನ್ ಹರಾಜನ್ನು ನಮ್ಮ ಹರಾಜು ಏಜೆನ್ಸಿ **GlobeTech**ನ ವೆಬ್‌ಸೈಟ್ **(URL Link-/ https://BestAuctionDeal.com)** ನಲ್ಲಿ ನಡೆಸಲಾಗುವುದು. ಅಡಮಾನದಾರರಿಗೆ ನೋಟೀಸಿನ ಮೂಲಕ ಒಟ್ಟು ಬಾಕಿಯನ್ನು ಹೆಚ್ಚುವರಿ ಬಡ್ಡಿಯೊಂದಿಗೆ ಪಾವತಿಸಲು **ಡಿಸೆಂಬರ್ 18, 2023**ರ **ಅಪರಾಹ್ನ 5.00**ರವರೆಗೆ ಕೊನೆಯ ಅವಕಾಶವನ್ನು ನೀಡಲಾಗಿದೆ. ಇಲ್ಲದಿದ್ದಲ್ಲಿ ಮೇಲಿನ ವೇಳಾಪಟ್ಟಿಯ ಪ್ರಕಾರ ಈ ಸಂರಕ್ಷಿತ ಸ್ವತ್ತುಗಳನ್ನು ಮಾರಾಟ ಮಾಡಲಾಗುತ್ತದೆ.

ನಿರೀಕ್ಷಿತ ಬಿಡ್‌ದಾರ(ರು) ಮುಂಗಡ ಹಣ ಠೇವಣಿ (ಇಎಂಡಿ) ಆರಟಿಜಿಸಿ/ ಡಿಮಾಂಡ್ ಡ್ರಾಫ್ಟ್ (ಡಿಡಿ)ನ್ನು (ಕಾಲಮ್ ಇ ನೋಡಿ) **ಐಸಿಐಸಿಐ ಹೋಮ್ ಫೈನಾನ್ಸ್ ಕಂಪೆನಿ ಲಿಮಿಟೆಡ್, 2ನೇ ಮಹಡಿ, ಸಪ್ತ ಸ್ವರ ಕಾಂಪ್ಲೆಕ್ಸ್, ಪ್ಯಾಲೇಸ್ ಹೋಂಡಾ ಶೋ ರೂಂನ ಪಕ್ಕ, ಫಯರ್ ಬ್ರಿಗೇಡ್‌ನ ಬಳಿ, ಕಾಂತರಾಜ್ ಅರಸ್ ರಸ್ತೆ, ಸರಸ್ವತಿಪುರಂ, ಮೈಸೂರು-570009** ಇಲ್ಲಿ **ಡಿಸೆಂಬರ್ 18, 2023**ರಂದು **ಅಪರಾಹ್ನ 04:00**ರೊಳಗೆ ಅಥವಾ ಅದಕ್ಕೂ ಮೊದಲು ಮೊದಲು ಸಲ್ಲಿಸತಕ್ಕದ್ದು. ನಿರೀಕ್ಷಿತ ಬಿಡ್‌ದಾರ(ರು) ನೋಂದಣಿ ಫಾರ್ಮ್ ಮತ್ತು ಬಿಡ್ ನಿಯಮಗಳು ಮತ್ತು ಷರತ್ತುಗಳ ಫಾರ್ಮ್‌ನ ಸಹಿಮಾಡಿದ ಪ್ರತಿಯನ್ನು **ಐಸಿಐಸಿಐ ಹೋಮ್ ಫೈನಾನ್ಸ್ ಕಂಪೆನಿ ಲಿಮಿಟೆಡ್, 2ನೇ ಮಹಡಿ, ಸಪ್ತ ಸ್ವರ ಕಾಂಪ್ಲೆಕ್ಸ್, ಪ್ಯಾಲೇಸ್ ಹೋಂಡಾ ಶೋ ರೂಂನ ಪಕ್ಕ, ಫಯರ್ ಬ್ರಿಗೇಡ್‌ನ ಬಳಿ, ಕಾಂತರಾಜ್ ಅರಸ್ ರಸ್ತೆ, ಸರಸ್ವತಿಪುರಂ, ಮೈಸೂರು-570009** - ಇಲ್ಲಿ **ಡಿಸೆಂಬರ್ 18, 2023**ರಂದು **ಅಪರಾಹ್ನ 05.00**ರೊಳಗೆ ಅಥವಾ ಅದಕ್ಕೂ ಮೊದಲು ಸಲ್ಲಿಸತಕ್ಕದ್ದು. ಮುಂಗಡ ಹಣ ಠೇವಣಿ ಡಿಮಾಂಡ್ ಡ್ರಾಫ್ಟ್ (ಡಿಡಿ) **"ಐಸಿಐಸಿಐ ಹೋಮ್ ಫೈನಾನ್ಸ್ ಕಂಪನಿ ಲಿಮಿಟೆಡ್-ಹರಾಜು"** ಪರವಾಗಿ ರಾಷ್ಟ್ರೀಕೃತ/ಶೆಡ್ಯೂಲ್ಡ್ ಬ್ಯಾಂಕ್‌ನಿಂದ ಪಡೆದಿದ್ದು ಮೈಸೂರಿನಲ್ಲಿ ಪಾವತಿಯಾಗುವಂತಿರಬೇಕು.

ಪರಿಶೀಲನೆ, ಹರಾಜಿನ ನಿಯಮಗಳು ಮತ್ತು ಷರತ್ತುಗಳಿಗೆ ಸಂಬಂಧಿಸಿದಂತೆ ಯಾವುದೇ ಹೆಚ್ಚಿನ ಸ್ಪಷ್ಟೀಕರಣಗಳಿಗಾಗಿ ಅಥವಾ ಟೆಂಡರ್‌ಗಳ ಸಲ್ಲಿಕೆಗಾಗಿ, ದಯವಿಟ್ಟು **ಐಸಿಐಸಿಐ ಹೋಮ್ ಫೈನಾನ್ಸ್ ಕಂಪನಿ ಲಿಮಿಟೆಡ್** ಅನ್ನು **022-69974300** ಅಥವಾ ನಮ್ಮ **ಮಾರಾಟ ಮತ್ತು ಮಾರ್ಕೆಟಿಂಗ್** ಪಾಲುದಾರ **NexXen Solutions Private Limited** ನ್ನು ಸಂಪರ್ಕಿಸಬಹುದು.

ಯಾವುದೇ ಹೆಚ್ಚಿನ ಕಾರಣಗಳನ್ನು ನೀಡದೆ, ಯಾವುದೇ ಅಥವಾ ಎಲ್ಲಾ ಬಿಡ್‌ಗಳನ್ನು ತಿರಸ್ಕರಿಸುವ ಹಕ್ಕನ್ನು ಅಧಿಕೃತ ಅಧಿಕಾರಿಯವರು ಕಾಯ್ದಿರಿಸಿಕೊಂಡಿದ್ದಾರೆ. ಮಾರಾಟದ ವಿವರವಾದ ನಿಯಮಗಳು ಮತ್ತು ಷರತ್ತುಗಳಿಗಾಗಿ, ದಯವಿಟ್ಟು **https://www.icicihfc.com/** ಗೆ ಭೇಟಿ ನೀಡಿ.

ದಿನಾಂಕ: ನವೆಂಬರ್ 11, 2023
ಸ್ಥಳ: ಮೈಸೂರು, ಬೆಂಗಳೂರು.

ಅಧಿಕೃತ ಅಧಿಕಾರಿ
ಐಸಿಐಸಿಐ ಹೋಮ್ ಫೈನಾನ್ಸ್ ಕಂಪನಿ ಲಿಮಿಟೆಡ್

ಇಂದಿನ ಪಂಚಾಂಗ ದಿನ ಭವಿಷ್ಯ

ಅದೃಷ್ಟ ಸಂಖ್ಯೆ: 11
• ಜಯತೀರ್ಥ ಆಚಾರ್ಯ

- **ಶೋಭಕೃತ್ ಸಂ।ರದ ತುಲಾ ಮಾಸ ದಿನ 25 ಸಲುವ ಆಶ್ವಯುಜ ಬಹುಳ ತ್ರಯೋದಶಿ 18।। ಗಳಿಗೆ**
- **ಮಹಾನಕ್ಷತ್ರ: ವಿಶಾಖಾ**
- **ನಿತ್ಯನಕ್ಷತ್ರ: ಚಿತ್ರಾ 48। ಗಳಿಗೆ**
- **ಋತು: ಶರದೃತು**
- **ರಾಹುಕಾಲ: 9.00-10.30 ಗಂಟೆ**
- **ಗುಳಿಕಕಾಲ: 6.00-7.30 ಗಂಟೆ**

ಮೇಷ ಅವಸರದಲ್ಲಿ ನಿರ್ಧಾರ ಕೈಗೊಳ್ಳದಿರಿ. ಉದ್ಯೋಗ ಸ್ಥಾನದಲ್ಲಿ ಕಳೆದುಹೋದ ಹೆಸರು ಮತ್ತೆ ಪ್ರಾಪ್ತಿ. ಮಾರ್ಗದರ್ಶಕನ ಸ್ಥಾನ ಮುಂದುವರಿಕೆ. ಸ್ವಂತ ಉದ್ಯಮದ ನೌಕರರನ್ನು ಹುರಿದುಂಬಿಸುವ ಕ್ರಮ. ಆರೋಗ್ಯ ಉತ್ತಮ.

ವೃಷಭ ಸೃಷ್ಟಿಯನ್ನು ವಿಶಾಲವಾಗಿಟ್ಟುಕೊಂಡು ಮುನ್ನಡೆಯಿರಿ. ಉದ್ಯೋಗದಲ್ಲಿನ ಸ್ಥಾನ ಸ್ಥಿರ. ಹೊಸ ಉದ್ಯಮದಲ್ಲಿ ಕೈಜೋಡಿಸಲು ಆಹ್ವಾನ. ವ್ಯವಹಾರ ವಿಸ್ತರಣೆಗೆ ವಿತ್ತಸಂಸ್ಥೆಯ ನೆರವು ಲಭ್ಯ. ಗಣ್ಯರೊಂದಿಗೆ ಓಡಾಟ.

ಮಿಥುನ ಒಂದರ ಮೇಲೊಂದು ಕಿರಿಕಿರಿ ತಂದಿಡುವ ನಕಾರಾತ್ಮಕ ಶಕ್ತಿಗಳ ಹಾವಳಿ. ಉದ್ಯೋಗ ಸ್ಥಾನದಲ್ಲಿ ಯಥಾಸ್ಥಿತಿಯಾದರೂ ಗೌರವ ವೃದ್ಧಿ. ಸ್ವಂತ ಉದ್ಯಮ ಮಂದಗತಿಯಲ್ಲಿ ಪ್ರಗತಿ. ಹಿರಿಯರಿಗೆ ಅನಾರೋಗ್ಯದ ಭೀತಿ.

ಕರ್ಕ ಸಂದರ್ಭಗಳ ಸದುಪಯೋಗವನ್ನು ಕಲಿತರೆ ಯಶಸ್ಸು ಅಬಾಧಿತ. ಉದ್ಯೋಗದ ವಿಷಯದಲ್ಲಿ ಆತಂಕ ಬೇಡ. ಪ್ರಾಚೀನ ವಿದ್ಯೆಯನ್ನು ಕಲಿವ ಆಸಕ್ತಿ. ಅಧ್ಯಾಪಕ ವೃತ್ತಿಯವರಿಗೆ ಹೆಚ್ಚುವರಿ ಜವಾಬ್ದಾರಿಗಳು.

ಸಿಂಹ ಕೆಲವೊಮ್ಮೆ ಮನುಷ್ಯ ಯೋಚಿಸಿದಂತೆಯೇ ವಾತಾವರಣ ನಿರ್ಮಾಣಗೊಳ್ಳುತ್ತದೆ ಎನ್ನುವುದಕ್ಕೆ ನಿಮ್ಮಷ್ಟು ಒಳ್ಳೆ ಉದಾಹರಣೆ ಇನ್ನೊಂದಿಲ್ಲ. ಮುಟ್ಟಿದ್ದೆಲ್ಲ ಚಿನ್ನವಾಗುವ ದಿನ. ಉದ್ಯಮ ಉತ್ಪನ್ನಗಳಿಗೆ ಬೇಡಿಕೆ.

ಕನ್ಯಾ ಅರಸುತ್ತಿರುವ ಬಳ್ಳಿ ಕಾಲಿಗೆ ಸುತ್ತಿ ಕೊಳ್ಳು ವಂತಹ ಅದೃಷ್ಟವಂತರು ನೀವು. ಉದ್ಯಮ ಆರಂಭಿಸುವ ಪ್ರಯತ್ನದಲ್ಲಿದ್ದಾಗಲೇ ಅಕಸ್ಮಾತ್ ಧನಾಗಮ. ಹಿರಿಯರ ಆಸ್ತಿ ಅಭಿವೃದ್ಧಿಯ ಯೋಜನೆ ಕಾರ್ಯರೂಪಕ್ಕೆ.

ತುಲಾ ಆನಂದವನ್ನು ಬೇಕಾದಂತೆ ಆವಾಹಿಸಿಕೊಳ್ಳುವ ವಿದ್ಯೆಯನ್ನು ಬಲ್ಲವರಾಗಿರುವುದರಿಂದ ನಿಮ್ಮ ವ್ಯಕ್ತಿತ್ವ ನಿಗೂಢವಾಗಿ ಕಾಣಿಸುತ್ತದೆ! ಉದ್ಯೋಗ ಅಬಾಧಿತ. ಸ್ವಂತದ ಉದ್ಯಮ ತಕ್ಕಮಟ್ಟಿಗೆ ನಿರಾತಂಕ ಸ್ಥಿತಿಯಲ್ಲಿ.

ವೃಶ್ಚಿಕ ಸಂತೃಪ್ತಿ, ಸಮಾಧಾನಗಳ ದಿನ. ಸಹೋದ್ಯೋಗಿಗಳಿಗೆ ಪ್ರೋತ್ಸಾಹಪೂರ್ವಕ ಮಾರ್ಗದರ್ಶನದಿಂದ ಗೌರವ ವೃದ್ಧಿ. ವ್ಯವಹಾರ ಸ್ಥಾನಕ್ಕೆ ಗಣ್ಯರ ಸಂದರ್ಶನ. ಗೃಹೋತ್ಪನ್ನಗಳ ಮಾರಾಟದಿಂದ ಲಾಭ.

ಧನು ಯಾವುದೇ ಪರಿಸ್ಥಿತಿಯನ್ನು ತಮ್ಮ ಅನುಕೂಲಕ್ಕೆ ತಕ್ಕಂತೆ ಬಳಸುವುದನ್ನು ಬಲ್ಲವರಿಗೆ ಬದುಕು ಸಮಸ್ಯೆಯಾಗುವುದಿಲ್ಲ. ಉದ್ಯೋಗವನ್ನು ಸಲೀಸಾಗಿ ನಿರ್ವಹಿಸುವಿರಿ. ಸಣ್ಣ ಪ್ರಮಾಣದಲ್ಲಿ ಕೃಷಿ ಆರಂಭ.

ಮಕರ ಮೃದುಭಾಷಿಯಾಗಿರುವುದರಿಂದ ಸುಲಭದಲ್ಲಿ ಕಾರ್ಯಸಿದ್ಧಿ. ಉದ್ಯೋಗದಲ್ಲಿ ಪ್ರತಿಭೆಗೆ ಮಾನ್ಯತೆ. ಲೆಕ್ಕ ಪರಿಶೋಧಕರು, ವೈದ್ಯರು, ಎಂಜಿನಿಯರ್‌ರು ಮೊದಲಾದ ವೃತ್ತಿಪರರಿಗೆ ಮುಗಿಯದ ಆತಂಕ.

ಕುಂಭ ಸಂಪತ್ತಿನ ಸದ್ವಿನಿಯೋಗದ ಯೋಚನೆ. ಉದ್ಯೋಗದಲ್ಲಿ ಇನ್ನಷ್ಟು ವೇತನ ಏರಿಕೆಯೊಂದಿಗೆ ಜವಾಬ್ದಾರಿ ಹೇರಿಕೆ. ಸಾಮಾಜಿಕ ಕಾರ್ಯಗಳಲ್ಲಿ ಇನ್ನಷ್ಟು ತೊಡಗಿಸಿಕೊಳ್ಳುವ ಆಸಕ್ತಿ. ಬಂಧುವರ್ಗದಲ್ಲಿ ವಿವಾಹಕ್ಕೆ ಸಹಾಯ.

ಮೀನ ಸಪ್ತಾಹದಲ್ಲಿ ಕೈಗೆತ್ತಿಕೊಂಡ ಮುಖ್ಯಕಾರ್ಯಗಳ ಮುಕ್ತಾಯ. ಉದ್ಯೋಗದಲ್ಲಿ ಗುರುಸ್ಥಾನ ಪ್ರಾಪ್ತಿ. ಸಾರ್ವಜನಿಕರಿಗೆ ಸೇವೆ ಸಲ್ಲಿಸುವ ವಿಭಾಗದಲ್ಲಿ ವಿಶ್ವಾಸ ಉಳಿಕೆ. ಸರಕಾರಿ ಇಲಾಖೆಗಳಿಂದ ಸಕಾರಾತ್ಮಕ ಸ್ಪಂದನ.

ಹಳ್ಳಕ್ಕೆ ಬಿದ್ದ ಬಾಲಕಿ ಮೇಲೆ ಹರಿದ ಬಸ್

ಹುಣಸೂರು: ಶಾಲಾ ಬಸ್ ಅಡಿಗೆ ಬಾಲಕಿಯೋರ್ವಳು ಸಿಲುಕಿದರೂ ಆಶ್ಚರ್ಯಕರ ರೀತಿಯಲ್ಲಿ ಪಾರಾಗಿರುವ ಘಟನೆ ನಗರದ ಮಂಜುನಾಥ ಬಡಾವಣೆಯಲ್ಲಿ ನಡೆದಿದ್ದು, ಸಿ.ಸಿ.ಕ್ಯಾಮರಾದಲ್ಲಿ ಸೆರೆಯಾಗಿರುವ ವಿಡಿಯೋ ವೈರಲ್ ಆಗಿದೆ. ನಗರದ ಮಂಜುನಾಥ ಬಡಾವಣೆ ನಿವಾಸಿ ಪೂರ್ಣಚಂದ್ರರ ಪುತ್ರಿ ಯಶಿಕಾ(9) ಸಾವು ಗೆದ್ದ ಬಾಲಕಿ. ಈಕೆ ಹುಣಸೂರು-ಮಡಿಕೇರಿ ಹೆದ್ದಾರಿಯ ತಾಲೂಕಿನ ಚಿಲ್ಕುಂದ ಬಳಿಯ ಜವನಿಕುಪ್ಪೆ ಗೇಟ್ ಬಳಿಯ ಐಕಾನ್ ಇಂಟರ್‌ನ್ಯಾಷನಲ್ ಸ್ಕೂಲ್‌ನ 3ನೇ ತರಗತಿ ವಿದ್ಯಾರ್ಥಿನಿ. ಗುರುವಾರ ಸಂಜೆ ಎಂದಿನಂತೆ ಶಾಲಾಬಸ್‌ನಲ್ಲಿ ಮನೆಗೆ ಬಂದ ಯಶಿಕಾ ಮನೆಯ ಎದುರಿನಲ್ಲಿ ತನ್ನ ಸಹೋದರಿಯೊಂದಿಗೆ ಬಸ್ ನಿಂದ ಕೆಳಗಿಳಿದಿದ್ದಾಳೆ. ಈ ವೇಳೆ ಬಸ್ ಮುಂದೆ ಹೋಗಿದೆ. ಬಾಲಕಿ ಬಸ್‌ನ ಅಡಿಯಲ್ಲಿ ಸಿಲುಕಿದ್ದಾಳೆ. ಅದೃಷ್ಟವಶಾತ್ ಎರಡು ಚಕ್ರಗಳ ಮಧ್ಯದಲ್ಲಿದ್ದುದ್ದರಿಂದ ಬಾಲಕಿ ಬಚಾವಾಗಿದ್ದಾಳೆ. ನಿರ್ಲಕ್ಷ್ಯ ತೋರಿರುವ ಚಾಲಕ ರಘುನನ್ನು ಕೆಲಸದಿಂದ ವಜಾಗೊಳಿ ಸಲಾಗಿದೆ ಎಂದು ಸಂಸ್ಥೆಯ ಪ್ರಾಚಾರ್ಯ ಬೀರೇಗೌಡ ತಿಳಿಸಿದ್ದಾರೆ.